# ನೋಟು ರದ್ಧತಿ

ಶ್ರೀಮಂತರ ಕಪ್ಪು ಹಣದ ವಿರುದ್ಧ ಸಮರವಲ್ಲ



## ಜನಸಾಮಾನ್ಯರ ವಿರುದ್ಧ
# ನಗದು ಸಮರ

ಪ್ರಕಟಣೆ:
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)
ಕರ್ನಾಟಕ ರಾಜ್ಯ ಸಮಿತಿ





ಆಹಾ! ಆರಂಭ ಅಂತೂ ಮಾಡಿದ್ದೇವೆ!

1978ರಲ್ಲಿ 1000/ 5000ರೂ.ಗಳ ನೋಟುಗಳ ರದ್ದತಿ ಮಾಡಿದ ಸಂದರ್ಭದಲ್ಲಿ ಆರ್.ಕೆ.ಲಕ್ಷ್ಮಣ್ ಅವರ ವ್ಯಂಗ್ಯಚಿತ್ರ

ಆಗ ಬಾಲ ಸಿಕ್ಕಿತ್ತು ಈ ಬಾರಿ ಅದೂ ಆಗಿಲ್ಲ!




ವ್ಯಂಗ್ಯಚಿತ್ರ: ಮಂಜುಲ್, ಡಿಎನ್‌ಎ




ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ, ಸಿಫಿ.ಕಾಂ

# ನೋಟು ರದ್ಧತಿ

## ಶ್ರೀಮಂತರ ಕಪ್ಪು ಹಣದ

## ವಿರುದ್ಧ ಸಮರವಲ್ಲ

## ಜನಸಾಮಾನ್ಯರ ವಿರುದ್ಧ

# ನಗದು ಸಮರ

ಪ್ರಕಟಣೆ:
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)
ಕರ್ನಾಟಕ ರಾಜ್ಯ ಸಮಿತಿ

## ‘ಗುರಿ ಈಡೇರಿತು’ ಎಂದರೇನರ್ಥ?

**ನಗದು ರೂಪದಲ್ಲಿದ್ದ ಕಪ್ಪು ಹಣವೂ ಬ್ಯಾಂಕುಗಳಿಗೆ ಬಂದಿದೆ; ಯಾವುದೇ ಖೋಟಾ ನೋಟು ಸಿಕ್ಕಿಲ್ಲ; ಭಯೋತ್ಪಾದಕರಿಂದ 500/1000 ರೂ. ನೋಟುಗಳು ಸಿಕ್ಕಿಲ್ಲ**

## ಕಳಕೊಂಡವರು

**ರೈತರು, ಕಾರ್ಮಿಕರು, ಸಣ್ಣ ವ್ಯಾಪಾರಸ್ಥರು, ಅಸಂಘಟಿತ ವಲಯ, ಸಹಕಾರಿ ವಲಯ**

## ಗಳಿಸಿಕೊಂಡವರು

**ಸಾಲ ಹಿಂದಿರುಗಿಸದ ಕಾರ್ಪೊರೇಟ್‌ಗಳು,ವಿಸಾ, ಮಾಸ್ಟರ್‌ಕಾರ್ಡ್, ಪೇಟಿಎಂ, ಫ್ರೀ ಚಾರ್ಜ್ ಇತ್ಯಾದಿ**

## ಡಿಜಿಟಲ್ ಆರ್ಥಿಕ

**ಅಂತರ್ರಾಷ್ಟ್ರೀಯ ಕಾರ್ಪೊರೇಟ್‌ಗಳ ಲಾಭಕ್ಕಾಗಿ**

## ನಮ್ಮ ಪಾತ್ರ

**ದೇಶಪ್ರೇಮಿ ಕರ್ತವ್ಯ**

**ಬೇಡಿಕೆಗಳು**

ನವಂಬರ್ 8ರಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಇದ್ದಕ್ಕಿದ್ದಂತೆ ನಮ್ಮ ದೇಶದ ಕರೆನ್ಸಿಯಲ್ಲಿ 86% ದಷ್ಟಿರುವ 500 ಮತ್ತು 1000 ರೂಪಾಯಿಗಳ ನೋಟುಗಳನ್ನು ರದ್ದು ಮಾಡುವ ಸರಕಾರದ ನಿರ್ಧಾರವನ್ನು ಪ್ರಕಟಿಸಿದರು. ಅವರು ದೇಶಪ್ರೇಮದ ಉಚ್ಚಾರಣೆ ಮಾಡುತ್ತ ಈ ನಡೆ ಭ್ರಷ್ಟಾಚಾರವನ್ನು ಕಪ್ಪುಹಣ ಮತ್ತು ಖೋಟಾ ನೋಟುಗಳನ್ನು ಧ್ವಂಸ ಮಾಡಲು, ಭಯೋತ್ಪಾದನೆಯ ಬೆನ್ನುಮೂಳೆ ಮುರಿಯಲು ಅಗತ್ಯ ಎಂದರು. ಈ ಘೋಷಿತ ಉದ್ದೇಶಗಳನ್ನು ಈಡೇರಿಸಲು ಇದು ಎಷ್ಟು ಪರಿಣಾಮಕಾರಿ ಎಂದು ಪ್ರಶ್ನಿಸಿದವರನ್ನು ದೇಶಪ್ರೇಮವಿಲ್ಲದವರು ಮತ್ತು ರಾಷ್ಟ್ರ–ವಿರೋಧಿಗಳು ಎಂದು ಸಾರಲಾಗುತ್ತಿದೆ.

ಪ್ರಧಾನ ಮಂತ್ರಿಗಳು 50 ದಿನಗಳನ್ನು ಕೊಡಿ, ಅದುವರೆಗೆ ಕಷ್ಟಗಳನ್ನು ಸಹಿಸಿಕೊಳ್ಳಿ ಎಂದು ಜನತೆಗೆ ಹೇಳಿದರು. ಅವರ ಪ್ರಕಾರ ದೇಶವನ್ನು ಭ್ರಷ್ಟಾಚಾರ ಮತ್ತು ಕಪ್ಪುಹಣದಿಂದ ದೇಶವನ್ನು ಸ್ವಚ್ಛಗೊಳಿಸಲು ಜನತೆ ಈ ಸಣ್ಣ ಬೆಲೆ ತೆರಲು ಸಿದ್ಧರಿರಬೇಕು. ಈಗ 50 ದಿನವೇನು, 80ದಿನಗಳಿಗಿಂತಲೂ ಹೆಚ್ಚಾಯಿತು. ಜನಗಳ ಸಂಕಟಗಳ ಬಗ್ಗೆ ವರದಿಗಳು ಬರದ ದಿನವೇ ಇಲ್ಲ. ನಮ್ಮ ದೇಶದ ದುಡಿಯುವ ಜನತೆ ಈ ಕ್ರಮದಿಂದ ಅತಿ ಹೆಚ್ಚು ಕಷ್ಟಗಳನ್ನು ಅನುಭವಿಸುತ್ತಿರುವವರು. ಜನಗಳಿಗೆ ಈಗಲೂ ತಾವು ಕಷ್ಟಪಟ್ಟು ಗಳಿಸಿದ ಹಣವನ್ನು ತಮ್ಮ ಖಾತೆಗಳಿಂದ ತೆಗೆಯಲು ಸಾಧ್ಯವಿಲ್ಲವಾಗಿದೆ, ಸರಕಾರ ಹೇರಿದ ಮಿತಿಗಳು ಇನ್ನೂ ಮುಂದುವರೆಯುತ್ತಿವೆ. ಈಗಲೂ ದೇಶದಲ್ಲಿ ಹೆಚ್ಚಿನ ಎಟಿಎಂಗಳು ಜನಗಳನ್ನು 'ನಗದು ಇಲ್ಲ' ಎಂಬ ಬೋರ್ಡುಗಳಿಂದಲೇ ಸ್ವಾಗತಿಸುತ್ತಿವೆ!

ಭಾರತೀಯ ರಿಝರ್ವ್ ಬ್ಯಾಂಕ್‌ನ ಗವರ್ನರ್ ಉರ್ಜಿತ್ ಪಟೇಲ್ ಹಣಕಾಸು ಸ್ಥಾಯೀ ಸಮಿತಿಗೆ ಸುಮಾರು 9.2ಲಕ್ಷ ಕೋಟಿ ರೂ.ಗಳಷ್ಟು ಹೊಸ ಕರೆನ್ಸಿಯನ್ನು ಚಲಾವಣೆಗೆ ಹಾಕಲಾಗಿದೆ. 15.44ಲಕ್ಷ ಕೋಟಿ ರೂ.ಗಳಷ್ಟು ಹಳೆಯ ನೋಟುಗಳನ್ನು ಚಲಾವಣೆಗೆ ಹಿಂತೆಗೆದುಕೊಳ್ಳಲಾಗಿತ್ತು. ಅಂದರೆ ಸುಮಾರು 6.24 ಲಕ್ಷ ರೂ.ಗಳನ್ನು ಇನ್ನೂ ಚಲಾವಣೆಗೆ ಬಿಟ್ಟಿಲ್ಲ ಎಂದಂತಾಯಿತು.

**ಸರಕಾರ ಜನಗಳ ಸಂಕಷ್ಟಗಳಿಗೆಲ್ಲ ಕುರುಡಾಗಿರುವುದೇ ವಾಸಿ ಎಂದು ಭಾವಿಸಿದಂತಿದೆ. 100ಕ್ಕೂ ಹೆಚ್ಚು ಮಂದಿ ತಮ್ಮ ಹಣವನ್ನು ಖರ್ಚಿಗೆ ಪಡೆಯಲು ಸಾಲಿನಲ್ಲಿ ನಿಂತಿದ್ದಾಗ ಸತ್ತರು ಎಂಬುದನ್ನು ಒಪ್ಪಲು ಕೂಡ ಅದು ನಿರಾಕರಿಸುತ್ತಿದೆ. ವಿಡಂಬನೆಯೆಂದರೆ, ನಮ್ಮ ಪ್ರಧಾನ ಮಂತ್ರಿಗಳು ಬಯಸಿದಂತೆ ಇದು ಅವರಿಗೆ 'ಕೊನೆಯ ಸಾಲು' ಆಗಿ ಬಿಟ್ಟಿತು. ಗಾಯಕ್ಕೆ ಉಪ್ಪು ಸವರುವಂತೆ ಸರಕಾರ ಡಿಸೆಂಬರ್ 27ರಂದು ತನ್ನ ಗುರಿ ಈಡೇರಿದೆ ಎಂದು ಸಾರಿತು.**

ಸಹಜವಾಗಿಯೇ 'ಗುರಿ ಈಡೇರಿದೆ' ಎಂದರೆ ಕಪ್ಪು ಹಣ ನಮ್ಮ ಆರ್ಥಿಕ ವ್ಯವಸ್ಥೆಯಿಂದ ಸಂಪೂರ್ಣ ನಿರ್ಮೂಲಗೊಂಡಿದೆ ಎಂದೇ ನಂಬಬೇಕು. ಅದೇ ರೀತಿ ಖೋಟಾ ಕರೆನ್ಸಿ ಕೂಡ ನಾಶವಾಯಿತು, ಅಂತೂ ಭಯೋತ್ಪಾದನೆಯ ಬೆನ್ನುಮೂಳೆ ಮುರಿಯಿತಪ್ಪಾ ಎಂದೂ ನಂಬಬೇಕು. ಆದರೆ ನಂತರ ಬೆಳಕಿಗೆ ಬಂದಿರುವ ಮಾಹಿತಿಗಳು ತೋರಿಸುತ್ತಿರುವುದೇ ಬೇರೆ. ಈ ಯಾನ ಗುರಿಗಳೂ ಈಡೇರಿಲ್ಲ. ಬದಲಿಗೆ, ವಾಸ್ತವವಾಗಿ ನಡೆದಿರುವುದು ಎಂದರೆ, ನೋಟು ರದ್ದತಿ ನಮ್ಮ ಆರ್ಥಿಕ ವ್ಯವಸ್ಥೆಯನ್ನು ಕಾರ್ಪೊರೇಟ್‌ಗಳಿಂದ ಮತ್ತಷ್ಟು ಲೂಟಿಗೆ ತೆರೆದು ಕೊಟ್ಟಿದೆ. ನಮ್ಮ ಸಂಕಟಗಳಿಂದ ಲಾಭ ಗಿಟ್ಟಿಸಲು ವಿದೇಶಿ ಕಂಪನಿಗಳಿಗೆ ಬಾಗಿಲು ತೆರೆದು ಕೊಟ್ಟಿದೆ.

## 'ಗುರಿ ಈಡೇರಿತು' ಎಂದರೇನರ್ಥ?


ಈಗ ಸರಕಾರ ನಮ್ಮ ಆರ್ಥಿಕ ವ್ಯವಸ್ಥೆಯನ್ನು ಒಂದು ನಗದುರಹಿತ ಆರ್ಥಿಕ ವ್ಯವಸ್ಥೆಯಾಗಿ ಡಿಜಿಟಲ್ ವ್ಯವಸ್ಥೆಯಾಗಿ ಪರಿವರ್ತಿಸಬೇಕು ಎಂದು ಪ್ರಕಟಿಸಿದೆ. ಈ ಡಿಜಿಟಲ್ ಆರ್ಥಿಕ ಎನ್ನುವುದು ನಿಜವಾಗಿಯೂ ನಮ್ಮ ದೇಶದಲ್ಲಿ 'ಭಾರೀ ಪ್ರಮಾಣ'ದ ನವ–ಉದಾರವಾದಿ ಸುಧಾರಣೆಗಳನ್ನು ತರಲು ಸರಕಾರಕ್ಕೆ ಒಂದು ವೇದಿಕೆಯಾಗಿ ಬಿಟ್ಟಿದೆ. 'ಗುರಿ ಈಡೇರಿತು' ಎಂದು ಪ್ರಧಾನ ಮಂತ್ರಿಗಳು ಪ್ರಕಟಿಸಿದಾಗ ಅವರ ನಿಜವಾದ ಅರ್ಥ ತಾನು ಇನ್ನಷ್ಟು ನವ–ಉದಾರವಾದಿ ಸುಧಾರಣೆಗಳನ್ನು ತರಲು ಬುನಾದಿ ಹಾಕುವಲ್ಲಿ ಯಶಸ್ವಿಯಾಗಿದ್ದೇನೆ ಎಂದಿರಬಹುದೇ?

**ನಿಜವಾಗಿ ನೋಟುರದ್ದತಿ ಸಾಧಿಸಿದ್ದೇನು ಎಂದು ಪರೀಕ್ಷಿಸೋಣ.**


### ಕಪ್ಪು ಕಣದ ನಿರ್ಮೂಲನೆ:

ರಿಝರ್ವ್ ಬ್ಯಾಂಕ್ ಬಿಡುಗಡೆ ಮಾಡಿದ ಇತ್ತೀಚಿನ (ಅಂದರೆ ಡಿಸೆಂಬರ್ 13, 2016ರಂದು) ಮಾಹಿತಿಯ ಪ್ರಕಾರ ಡಿಸೆಂಬರ್ 10ರ ವರೆಗೆ 12.4ಲಕ್ಷ ಕೋಟಿ ರೂ.ನಷ್ಟು ಠೇವಣಿಗಳು ಬ್ಯಾಂಕುಗಳಲ್ಲಿ ಸಂಗ್ರಹವಾಗಿದೆ. ಬ್ಯಾಂಕುಗಳಿಗೆ ಬರುತ್ತಿದ್ದ ಈ ಅಪಾರ ಠೇವಣಿಗಳಿಂದ ದಿಗಿಲುಗೊಂಡ ಸರಕಾರ ಆನಂತರ ಬಂದ ಠೇವಣಿಗಳ ಬಗ್ಗೆ ಮಾಹಿತಿ ನೀಡದಿರಲು ಸರಕಾರ ರಿಝರ್ವ್ ಬ್ಯಾಂಕನ್ನು ಬಲವಂತ ಮಾಡಿದೆ.

ನೋಟು ರದ್ದತಿಯಾಗಿ 80ದಿನಗಳು ದಾಟಿ ಹೋದರೂ ರಿಝರ್ವ್ ಬ್ಯಾಂಕ್‌ಗೆ ಇನ್ನೂ ರದ್ದಾದ ನೋಟುಗಳ 'ನಿಖರವಾದ ಮೊತ್ತ' ಎಷ್ಟು ಎಂದು ಗೊತ್ತಿಲ್ಲವಂತೆ, ಇನ್ನೂ ಕೂಡ ಠೇವಣಿಯಾದ ನೋಟುಗಳ ಸಂಖ್ಯೆ ಎಷ್ಟು ಎಂದು 'ತಾಳೆ' ಹಾಕಲು ಅದಕ್ಕೆ ಆಗಿಲ್ಲ. ಸಂಸತ್ತಿನ ಸಾರ್ವಜನಿಕ ಲೆಕ್ಕಪತ್ರ ಸಮಿತಿ(ಪಿಎಸಿ)ಗೆ ಸಲ್ಲಿಸಿದ ಲಿಖಿತ ದಾಖಲೆಯಲ್ಲಿ "ಹಿಂತೆಗೆದುಕೊಂಡ 'ನಿರ್ದಿಷ್ಟ ಪಡಿಸಿದ ಬ್ಯಾಂಕ್ ನೋಟುಗಳು'(ಎಸ್‌ಬಿಎನ್) ನಿಖರವಾಗಿ ಎಷ್ಟು ಎಂದು ಲೆಕ್ಕ ಹಾಕಲಾಗುತ್ತಿದೆ" ಎಂದು ಅದು ಹೇಳಿದೆ. 'ನಿರ್ದಿಷ್ಟ ಪಡಿಸಿದ ಬ್ಯಾಂಕ್ ನೋಟುಗಳು' ಎಂದರೆ




ವ್ಯಂಗ್ಯಚಿತ್ರ: ಕೇಶವ್, ದಿ ಹಿಂದು




ವ್ಯಂಗ್ಯಚಿತ್ರ: ಮಂಜುಲ್. ಡಿಎನ್‌ಎ

ವ್ಯಂಗ್ಯಚಿತ್ರ: ಕೀರ್ತಿಶ್, ಬಾಮುಲಾಹಿಜಾ.ಕಾಂ



ರದ್ದು ಮಾಡಿದ ನೋಟುಗಳು.

**ವರದಿಗಳ ಪ್ರಕಾರ ಬ್ಯಾಂಕುಗಳು ರದ್ದು ಮಾಡಿದ 15.44ಲಕ್ಷ ಕೋಟಿ ರೂ.ಗಳಲ್ಲಿ ಏನಿಲ್ಲೆಂದರೂ 90ರಿಂದ 97ಶೇ. ಮೊತ್ತದ ಕರೆನ್ಸಿಗಳನ್ನು ಪಡೆದಿದೆ ಎಂದು ಲೆಕಕಾಚಾರಗಳು ಹೇಳುತ್ತವೆ. ಇನ್ನೊಂದೆಡೆಯಲ್ಲಿ ಸುಮಾರು 100ಶೇ. ಅಥವ ಅದಕ್ಕಿಂತಲೂ ಸ್ವಲ್ಪ ಹೆಚ್ಚೇ ಮೊತ್ತ ಮತ್ತೆ ಬ್ಯಾಂಕುಗಳಿಗೆ ಠೇವಣಿಗಳಾಗಿ ಹಿಂದಿರುಗಿವೆ. ತನ್ನ ಮರ್ಯಾದೆ ಹೋಗುತ್ತದೆ ಎಂದು ಕಂಡುಕೊಂಡ ಸರಕಾರ ಈ ಮಾಹಿತಿಯನ್ನು ಜನಗಳಿಗೆ ತಿಳಿಸಲು ಸರಕಾರಕ್ಕೆ ಇಷ್ಟವಿಲ್ಲದಾಗಿದೆ.**

ಇದರಲ್ಲಿ ತೀರ ಕಡಿಮೆ ಅಂದಾಜನ್ನೇ ತೆಗೆದುಕೊಳ್ಳೋಣ. ಇದು ಕೂಡ ಸರಕಾರದ ದಾವೆಗಳನ್ನು ಗಾಳಿಗೆ ತೂರುತ್ತದೆ. ಏಕೆಂದರೆ ರದ್ದಾದ ನೋಟುಗಳಲ್ಲಿ 20% ಮೊತ್ತದ ನೋಟುಗಳಾರೂ ಹಿಂದಕ್ಕೆ ಬರುವುದಿಲ್ಲ, ಅವು ಕಪ್ಪುಹಣ ಎಮದು ಲೆಕ್ಕ ಹಾಕಿತ್ತು. ಆದು ನಿಜವಾಗಿಯೂ ಸಂಭವಿಸಿದ್ದಿದ್ದರೆ, ಸರಕಾರ ತನ್ನ 'ಗುರಿ ಈಡೇರಿತು' ಎಂದು ಸಆರಬಹುದಾಗಿತ್ತು. ಆದರೆ ಬ್ಯಾಂಕುಗಳಲ್ಲಿ ಅದಕ್ಕಿಂತ ಬಹಳ ಹೆಚ್ಚು ಹಣ ಠೇವಣಿಯಾದಾಗಿರುವುದರಿಂದ ಅದಕ್ಕೆ ಮುಖಭಂಗವಾಗಿದೆ, ಮಾತುಗಳು ಇಲ್ಲವಾಗಿವೆ.

ನಿಜವಾಗಿ ಸಂಭವಿಸಿರುವುದು ನಾವು ಮುಂದಿಡುತ್ತ ಬಂದಿದ್ದ ತರ್ಕಗಳನ್ನು ಸಾಬೀತು ಮಾಡಿದೆ:

** ನಗದು ರೂಪದಲ್ಲಿರುವ ಕಪ್ಪು ಹಣದ ಪ್ರಮಾಣ ಬಹಳ ಸಣ್ಣದು– ದೇಶದಲ್ಲಿರುವ ಒಟ್ಟು ಕಪ್ಪುಹಣದ 5–6ಶೇ. ಇರಬಹುದಷ್ಟೇ.*

** ನಮ್ಮ ಆರ್ಥಿಕದಲ್ಲಿರುವ ಒಟ್ಟು ಕಪ್ಪು ಹಣ ನಮ್ಮ ಒಟ್ಟು ರಾಷ್ಟ್ರೀಯ ಉತ್ಪನ್ನ(ಜಿಡಿಪಿ)ದ 25ರಿಂದ 62 ಶೇ. ದ ನಡುವೆ ಇರಬಹುದು.*

** ಕಪ್ಪು ಹಣದ ಹೆಚ್ಚಿನ ಭಾಗ(ಏನಿಲ್ಲೆಂದರೂ ಕನಿಷ್ಟ 50ಶೇ.) ರಿಯಲ್ ಎಸ್ಟೇಟ್‌ನಲ್ಲಿದೆ*

** ಕಪ್ಪು ಹಣದ ಉಳಿದ ಬಹುಭಾಗ ರಫ್ತಾಗುತ್ತದೆ ಅಥವ ಚೆನ್ನಾಗಿ ನೆಲೆಗೊಂಡಿರುವ ಹವಾಲಾ ಮತ್ತು ವಿದೇಶಿ ಬ್ಯಾಂಕುಗಳಲ್ಲಿ 'ಲೆಯರಿಂಗ್' ಮೂಲಕ ಬಿಳಿಯಾಗುತ್ತದೆ.*

ನೆನಪಿಸಿಕೊಳ್ಳಿ, 2014 ರ ಚುನಾವಣಾ ಪ್ರಚಾರದಾದ್ಯಂತ ಬಿಜೆಪಿ ತಾನು ಅಧಿಕಾರಕ್ಕೆ ಬಂದ ಕೂಡಲೇ ಸ್ವಿಸ್ ಬ್ಯಾಂಕುಗಳಲ್ಲಿ ಪೇರಿಸಿಟ್ಟ ಕಪ್ಪು ಹಣವನ್ನು ವಾಪಾಸು ತರುತ್ತದೆ, ಅಷ್ಟೇ ಅಲ್ಲ, ಪ್ರತಿ ಭಾರತೀಯ ನಾಗರಿಕರ ಬ್ಯಾಂಕ್ ಖಾತೆಯಲ್ಲಿ 15ಲಕ್ಷ ರೂ. ಜಮಾ ಮಾಡುತ್ತದೆ ಎಂದು ಭರವಸೆ ನೀಡಲಾಗಿತ್ತು. ಅಧಿಕಾರಕ್ಕೆ ಬಂದು ಅರ್ಧದಷ್ಟು ಅವಧಿ ಮುಗಿದರೂ ಏನೂ ಬಂದಿಲ್ಲ, ಈಗಂತೂ ಏನೂ ಬರುವುದಿಲ್ಲ ಎಂಬುದು ಸ್ಪಷ್ಟವಾಗಿದೆ.

**ನೋಟು ರದ್ದತಿಯ ನಂತರ ನಿಜವಾಗಿ ನಡೆದದ್ದೆಂದರೆ, ನಗದು ರೂಪದಲ್ಲಿರುವ ಸ್ವಲ್ಪ ಕಪ್ಪು ಹಣವನ್ನೂ ಬಿಳಿಯಾಗಿಸಲು ಅವಕಾಶ ಕೊಟ್ಟದ್ದು. ಅಲ್ಲದೆ, ನೋಟು**

**ರದ್ದತಿ ಕಪ್ಪು ಹಣದ ಮೂಲವನ್ನು ಇಲ್ಲವಾಗಿಸುವುದಿಲ್ಲ ಎಂದು ಮತ್ತೊಮ್ಮೆ ಸಾಬೀತಾಗಿದೆ**. ಏಕೆಂದರೆ ನೋಟು ರದ್ದತಿಯ ಮೊದಲ ಆರು ವಾರಗಳಲ್ಲೇ ಆದಾಯ ತೆರಿಗೆ ಇಲಾಖೆ 92 ಕೋಟಿ ರೂ.ಗಳು, ಅಥವ ಸುಮಾರು 20ಶೇ.ದಷ್ಟು ಆಗಲೇ ಹೊಸದಾಗಿ ಚಲಾವಣೆಗೆ ಬಂದ 2000ರೂ. ನೋಟುಗಳಲ್ಲೇ ವಶಪಡಿಸಿಕೊಂಡಿದೆ!

## ಖೋಟಾ ಕರೆನ್ಸಿಯ ನಿರ್ಮೂಲನೆ

ಮೋದಿ ಸರಕಾರದ ಹಣಕಾಸು ಮಂತ್ರಾಲಯ ಸಂಸತ್ತಿನ ಸಆರ್ವಜನಿಕ ಲೆಕ್ಕಪತ್ರ ಸಮಿತಿಗೆ ಸಲ್ಲಿಸಿದ ವಿವರಣೆಯಲ್ಲಿ ನವಂಬರ್ 8 ರಿಂದ ಡಿಸೆಂಬರ್ 30ರ ನಡುವೆ ಯಾವುದೇ ಖೋಟಾ ನೋಟುಗಳನ್ನು ವಶಪಡಿಸಿಕೊಂಡಿಲ್ಲ ಎಂದು ತಿಳಿಸಿದೆ(ಇಂಡಿಯನ್ ಎಕ್ಸ್‌ಪ್ರೆಸ್, ಜನವರಿ 21, 2017 ನೋಡಿ). ರಿಝರ್ವ್ ಬ್ಯಾಂಕ್ ಕೂಡ ನೋಟು ರದ್ದತಿಯ ನಂತರ ಪತ್ತೆಯಾದ ಖೋಟಾ ನೋಟುಗಳ ಮೌಲ್ಯ ಎಷ್ಟು ಎಂಬ ಮಾಹಿತಿ ಹಕ್ಕು ಕಾಯ್ದೆ(ಆರ್‌ಟಿಐ) ಅಡಿ ಕೇಳಿದ ಪ್ರಶ್ನೆಗೆ ನೀಡಿದ ಉತ್ತರದಲ್ಲೂ ಸುಮಾರಾಗಿ ಇಂತಹುದೇ ಅಂಶವನ್ನು ಒಪ್ಪಿಕೊಂಡಿದೆ: "ಸದ್ಯಕ್ಕೆ ನಮ್ಮ ಬಳಿ ಈ ಪ್ರಶ್ನೆಗೆ ದೃಢಪಡಿಸಿದ ಮಾಹಿತಿ ಇಲ್ಲ" ಎಂದು ರಿಝರ್ವ್ ಬ್ಯಾಂಕಿನ ಕರೆನ್ಸಿ ನಿರ್ವಹಣೆ(ಖೋಟಾ ನೋಟು ವಿಚಕ್ಷಣಾ) ವಿಭಾಗ ಈ ಉತ್ತರದಲ್ಲಿ ಹೇಳಿದೆ. ಈ ಉತ್ತರಗಳು ಸರಕಾರ ನೋಟುರದ್ದತಿಯ ಎರಡನೇ ಉದ್ದೇಶವನ್ನು ಸಾಧಿಸುವಲ್ಲಿಯೂ ವಿಫಲವಾಗಿದೆ ಎಂಬುದನ್ನು ಸ್ಪಷ್ಟಗೊಳಿಸುತ್ತವೆ.

ನಮ್ಮ ಆರ್ಥಿಕದಲ್ಲಿ ಚಲಾವಣೆಯಲ್ಲಿರುವ ಖೋಟಾ ನೋಟುಗಳ ಪ್ರಮಾಣ ಚಲಾವಣೆಯಲ್ಲಿರುವ ನೋಟುಗಳ 0.0002 ರಿಂದ .0008 ಶೇ.( ಅಂದರೆ 10ಲಕ್ಷದಲ್ಲಿ 2ರಿಂದ 8) ಮಾತ್ರ ಎಂಬುದನ್ನು ನೆನಪಿಸಿಕೊಳ್ಳಬೇಕು. 2015–16ರಲ್ಲಿ ವಶಪಡಿಸಿಕೊಂಡ ಖೋಟಾ ನೂಟುಗಳ ಮೊತ್ತ ಕೇವಲ 30 ಕೋಟಿರೂ. ಈ ಅತೀ ಸಣ್ಣ ಪ್ರಮಾಣದ ಖೋಟಾ ನೋಟುಗಳನ್ನು ಇಲ್ಲವಾಗಿಸಲು 86ಶೇ.ದಷ್ಟು ನಮ್ಮ ಕರೆನ್ಸಿಯನ್ನು ರದ್ದು ಮಾಡುವುದೆಂದರೆ ಇಲಿ ಓಡಿಸಲು ಇಡೀ ಮನೆಯನ್ನೇ ಸುಟ್ಟಂತೆಯೇ ಸರಿ!

# ಭಯೋತ್ಪಾದನೆಗೆ ಹಣಸಂಗ್ರಹದ ನಿರ್ಮೂಲನೆ

ಡಿಸೆಂಬರ್ 30 ರ ವರೆಗೆ ಭಯೋತ್ಪಾದಕ ಗುಂಪುಗಳು, ಶಸ್ತ್ರಾಸ್ತ್ರ ಕಳ್ಳಸಾಗಣೆದಾರರು, ಮಾದಕದ್ರವ್ಯ ಸಾಗಿಸುವವರು ಮತ್ತು ಬೇಹುಗಾರರಿಂದ ವಶಪಡಿಸಿಕೊಂಡ ಖೋಟಾ 500 ಮತ್ತು 1000 ರೂಪಾಯಿ ನೋಟುಗಳ ಪ್ರಮಾಣ ಎಷ್ಟು ಎಂಬ ಸಂಸತ್ತಿನ ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಇನ್ನೊಂದು ನಿರ್ದಿಷ್ಟ ಪ್ರಶ್ನೆಗೆ ಹಣಕಾಸು ಮಂತ್ರಾಲಯ ನೀಡಿದ ಉತ್ತರದಲ್ಲಿ ಹೀಗೆ ಹೇಳಿದೆ: "ನವಂಬರ್8,2016ರಿಂದ ಡಿಸೆಂಬರ್ 30, 2016ರ ನಡುವೆ ಸಿಬಿಇಸಿ(ಕೇಂದ್ರೀಯ ಅಬಕಾರಿ ಮತ್ತು ಸೀಮಾಸುಂಕ ಮಂಡಳಿ)ಯ ವಿವಿಧ

ಏಜೆಂಸಿಗಳು ಯಾವುದೇ ಖೋಟಾ ಕರೆನ್ಸಿ ವಶಪಡಿಸಿಕೊಂಡಿಲ್ಲ."(ಇಂಡಿಯನ್ ಎಕ್ಸ್‌ಪ್ರೆಸ್, ಜನವರಿ 21, 2017).

ನೋಟುರದ್ದತಿಗೆ ಕೊಟ್ಟ ಒಂದು ದೇಶಪ್ರೇಮಿ ತರ್ಕವೆಂದರೆ ಭಯೋತ್ಪಾದಕರಿಗೆ ಹಣ ಸಂಗ್ರಹದ ಒಂದು ಮೂಲವಾದ ನೆರೆದೇಶಗಳು ತಯಾರಿಸುವ ಖೋಟಾ ನೋಟುಗಳ ಹರಿವನ್ನು ಅದು ನಿಲ್ಲಿಸುತ್ತದೆ ಎಂಬುದು. ಹಣಕಾಸು ಮಂತ್ರಾಲಯ ನೀಡಿದ ಈ ಮೇಲಿನ ಉತ್ತರ ಈ ಉದ್ದೇಶ ಕೂಡ ಈಡೇರಿಲ್ಲ ಎಂಬುದನ್ನು ಸಾಬೀತು ಪಡಿಸುತ್ತದೆ. ನೋಟುರದ್ದತಿ ಭಯೋತ್ಪಾದನೆಗೆ ಹಣ ಪೂರೈಕೆಯನ್ನೇನೂ ನಿಲ್ಲಿಸುವುದಿಲ್ಲ. ಕಾಶ್ಮೀರ ಮತ್ತಿತರ ಕಡೆಗಳಲ್ಲಿ ಭಯೋತ್ಪಾದಕರ ಮೃತ ಶರೀರ ಗಳಿಂದ ಹೊಸ 2000ರೂ. ನೋಟುಗಳು ಸಿಕ್ಕವು ಎಂಬುದು ನೋಟು ರದ್ದತಿ ಭಯೋತ್ಪಾದನೆಯನ್ನು ಎದುರಿಸುವಲ್ಲಿಯೂ ವಿಫಲವಾಗಿದೆ ಎಂಬುದನ್ನು ಬಯಲು ಮಾಡುತ್ತದೆ.

ಈ ಮೇಲಿನ ಸಂಗತಿಗಳು ಸರಕಾರ ನೋಟುರದ್ದತಿಯ ಮೂರು ಘೋಷಿತ ಗುರಿಗಳಲ್ಲಿ ಯಾವುದನ್ನೂ ಸಾಧಿಸುವಲ್ಲಿ ವಿಫಲವಾಗಿದೆ ಎಂಬುದು ಎದ್ದು ಕಾಣುತ್ತದೆ. ಈ ತೀರ್ಮಾನಕ್ಕೆ ನಾವು ಬೇರಾವ ಆಧಾರದಿಂದಲೂ ಅಲ್ಲ, ಸ್ವತಃ ಸರಕಾರದ ಮೂಲಗಳಿಂದಲೇ ಬಂದಿರುವ ಮಾಹಿತಿಗಳಿಂದಲೇ ಬರುತ್ತೇವೆ.

**ಇಂತಹ ಸ್ಪಷ್ಟ ಸಂಗತಿಗಳಿರುವಾಗ ಸರಕಾರ 'ಗುರಿ ಈಡೇರಿತು' ಎಂದು ಹೇಗೆ ಸಾರಲು ಸಾಧ್ಯ? ಆದ್ದರಿಂದಲೇ ನೋಟು ರದ್ದತಿಯ ನಿಜವಾದ ಗುರಿ ಸರಕಾರ ಘೋಷಿಸಿದ ಉದ್ದೇಶಗಳ ಸಾಧನೆಯಲ್ಲ ಎಂದು ನಾವು ಹೇಳುತ್ತಿರುವುದು. ಈ ಇಡೀ ಪ್ರಾಜೆಕ್ಟ್‌ನ ಹಿಂದಿನ ನಿಜವಾದ ಆಶಯಗಳನ್ನು ಅದು ಉಚ್ಚರಿಸಿಯೇ ಇಲ್ಲ.** ಇದನ್ನು ಇನ್ನೂ ಹೆಚ್ಚು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಲು ನೋಟು ರದ್ದತಿಯಿಂದ ಕಷ್ಟಪಡುತ್ತಿರುವವರು ಯಾರು, ಪ್ರಯೋಜನ ಪಡೆದವರು ಯಾರು ಎಂಬುದನ್ನು ನೋಡೋಣ.

## ಕಳಕೊಂಡವರು


ನೋಟು ರದ್ದತಿಯಿಂದ ಅತೀ ಹೆಚ್ಚು ಕಷ್ಟ ಪಟ್ಟಿರುವವರು, ಪಡುತ್ತಿರುವವರು ನಮ್ಮ ದೇಶದ ಜನಸಾಮಾನ್ಯರು. ನೋಟುರದ್ದತಿಯಿಂದ ತಮ್ಮ ಕೆಲಸ ಕಳಕೊಂಡವರ ಈ ಅಂಕಿ–ಅಂಶಗಳನ್ನು ನೋಡಿ:

* 25 ಕೋಟಿ ಕೃಷಿ ಕಾರ್ಮಿಕರು ಮತ್ತು ಬಡರೈತರು
* 4.5 ಕೋಟಿ ಕಟ್ಟಡ ಕೆಲಸಗಾರರು
* 4 ಲಕ್ಷ ಸೂರತ್ ಕೈಗಾರಿಕಾ ಸಮುಚ್ಚಯಗಳ ಕಾರ್ಮಿಕರು
* 4 ಲಕ್ಷ ತಿರುಪುರ್ ಗಾರ್ಮೆಂಟ್ ಘಟಕಗಳ ಕಾರ್ಮಿಕರು
* 50 ಸಾವಿರ ಪಾಲಾರ್ ಕಣಿವೆಯ ಚರ್ಮ ಸಮುಚ್ಚಯಗಳ ಕಾರ್ಮಿಕರು.

ಇದು ಒಂದು ಸ್ಯಾಂಪಲ್. ದೇಶಾದ್ಯಂತ ಇಂತಹ ಉದಾಹರಣೆಗಳು ಅಸಂಖ್ಯ.


ವ್ಯಂಗ್ಯಚಿತ್ರ:
ಕೀರ್ತೀಶ್,
ಬಾಮುಲಾಹಿಜ.ಕಾಂ




ವ್ಯಂಗ್ಯಚಿತ್ರ:
ನೈನನ್,
ಟೈಂಸ್ ಆಫ್ ಇಂಡಿಯ

ವ್ಯಂಗ್ಯಚಿತ್ರ:
ಪರೇಶ್



**ನಮ್ಮ ದೇಶದ ರೈತರು ಸಂಕಷ್ಟಗಳಿಗೀಡಾದರು**. ಟೋಮಾಟೊ, ಈರುಳ್ಳಿ, ಬೇಳೆಗಳು ಮತ್ತು ಧಾನ್ಯಗಳನ್ನು ಬೆಳೆಯಲು ತಮ್ಮ ಹಣವನ್ನು ತೊಡಗಿಸಿದ ರೈತರಿಗೆಲ್ಲ ತಾವು ಬೆಳೆದ ಬೆಳೆಗಳಿಗೆ ಗಿರಾಕಿಗಳು ಸಿಗದೆ ತಮ್ಮ ಸಾವಿರಾರು ಕೆಜಿ ಉತ್ಪನ್ನಗಳನ್ನು ರಸ್ತೆಗಳಲ್ಲಿ ಚೆಲ್ಲಬೇಕಾಗಿ ಬಂತು. ಅವರಲ್ಲಿ ಬಹಳಷ್ಟು ಮಂದಿ ಸಾಗುವಳಿಗೆ ಸಾಲ ತೆಗೆದುಕೊಂಡಿದ್ದರು, ಒಳ್ಳೆ ಬೆಳೆ ಸಿಕ್ಕರೆ ಸಾಲ ತೀರಿಸಿ ಮುಂದಿನ ಸೀಜನ್ನಿಗೆ ಉಳಿಸಬಹುದೆಂದು ನಿರೀಕ್ಷಿಸಿದ್ದರು. ಒಳ್ಳೆಯ ಬೆಳೆಗಳೇನೋ ಬಂದವು. ಆದರೆ ನೋಟು ರದ್ದತಿಯ ಪರಿಣಾಮವಾಗಿ ಮಾರುಕಟ್ಟೆಗಳಲ್ಲಿ ಮಾರಲಾಗಲಿಲ್ಲ, ದೊಡ್ಡ ಸೋಲು ಅನುಭವಿಸಬೇಕಾಯಿತು. ಈಗ ಹೊಸ ಕೃಷಿ ಸೀಜನ್ ಶುರುವಾಗುತ್ತಿರುವಾಗ ಬೀಜ, ರಸಗೊಬ್ಬರ ಇತ್ಯಾದಿ ಲಾಗುವಾಡುಗಳನ್ನು ಖರೀದಿಸಲು ಹಣವಿಲ್ಲ, ಹಿಂದಿನ ಸಾಲಗಳನ್ನೇ ತೀರಿಸದೆ ಮತ್ತೆ ಸಾಲ ಮಾಡುವಂತಿಲ್ಲ. ಹೀಗೆ ನೊಟುರದ್ದತಿ ನಮ್ಮ ದೇಶದ ರೈತರಿಗಂತೂ ಎರಡಲಗಿನ ಕತ್ತಿಯಾಗಿದೆ.

**ನಮ್ಮ ದೇಶದ ಕಾರ್ಮಿಕರೂ ಸಂಕಷ್ಟಗಳಿಗೀಡಾಗಿದ್ದಾರೆ**. ಹಲವಾರು ಕಾರ್ಮಿಕರಿಗೆ ಅವರ ಸಂಬಳ ಸಿಗಲಿಲ್ಲ– ನಗದು ಲಭ್ಯವಿಲ್ಲ ಎಂಬ ಕಾರಣಕ್ಕಾಗಿ. ನೂರಾರು, ಸಾವಿರಾರು ಕಾರ್ಮಿಕರು ಇದ್ದಕ್ಕಿದ್ದಂತೆ ಕೆಲಸ ಕಳಕೊಂಡರು. ಏಕೆಂದರೆ ಹಲವಾರು ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳು ಮುಚ್ಚಿದವು. ಪರಿಸ್ಥಿತಿ ಒಂದು ವೇಳೆ ಸುಧಾರಿಸಿದರೂ ಕೂಡ ಇವರಿಗೆಲ್ಲ ಮತ್ತೆ ಕೆಲಸ ಸಿಗುವುದು ಸುಲಭವಲ್ಲ ಎಂದೂ ಕೆಲವರು ಭವಿಷ್ಯ ನುಡಿದಿದ್ದಾರೆ.

* ಉದ್ಯಮಿಗಳ ಒಂದು ಪ್ರಮುಖ ಸಂಘನೆ ಅಸ್ಸೊಚಾಮ್‌ನ ಒಂದು ಸರ್ವೆಯ ಪ್ರಕಾರ ತಕ್ಷಣವೇ ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳನ್ನು ತಟ್ಟಿರುವುದರಿಮದ ಉದ್ಯೋಗ ನಿರ್ಮಾಣದ ಮೇಲೆ ನಕಾರಾತ್ಮಕ ಪರಿಣಾಮ ಉಂಟಾಗಿದೆ.

* ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಇತ್ತೀಚಿನ ಒಂದು ಸರ್ವೆ ಈ ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆ ವಲಯದ ಉತ್ಪಾದನೆಯಲ್ಲಿ 40ರಿಂದ 50ಶೇ. ನಷ್ಟ ಉಂಟಾಗಿದೆ ಎಂದು ತಿಳಿಸಿದೆ.

ವಾಶಿಂಗ್ಟನ್ ವಿಶ್ವವಿದ್ಯಾಲಯ ಭಾರತದಲ್ಲಿನ ತನ್ನ ಸಹಯೋಗಿಗಳೊಂದಿಗೆ ನೋಟುರದ್ದತಿಯ ಪರಿಣಾಮಗಳನ್ನು ಕುರಿತಂತೆ ಮಾಡಿರುವ ಒಂದು ಅಧ್ಯಯನದಲ್ಲಿ ಆದಾಯಗಳು ಇಳಿದಿರುವುದು ಕಂಡು ಬಂದಿದೆ. ನವಂಬರ್ ತಿಂಗಳಲ್ಲಿ ಕುಟುಂಬಗಳ ತಿಂಗಳ ಆದಾಯಗಳಲ್ಲಿ ಸರಾಸರಿ 10ಶೇ. ಇಳಿಕೆಯಾಗಿದೆಯಂತೆ.

ನೋಟುರದ್ದತಿಯ ದುಷ್ಪರಿಣಾಮಗಳಿಂದ ಹೊರ ಬರಲು ಒಂದಕ್ಕಿಂತ ಹೆಚ್ಚು ತ್ರೈಮಾಸಿಕ ಅವಧಿ ಬೇಕಾದೀತು ಎಂದು ಕೆಲವು ಅರ್ಥಶಾಸ್ತ್ರಜ್ಞರು ಹೇಳುತ್ತಿದ್ದಾರೆ.

**ಸಣ್ಣ ವ್ಯಾಪಾರಸ್ಥರೂ ಕಷ್ಟಗಳನ್ನು ಅನುಭವಿಸಬೇಕಾಗಿ ಬಂದಿದೆ.** ನಗದಿನ ಕೊರತೆಯಿಂದಾಗಿ ಹಲವು ಸಣ್ಣ ವ್ಯವಹಾರಗಳನ್ನು ನಡೆಸುವವರು ಮತ್ತು ಚಿಲ್ಲರೆ ವ್ಯಾಪಾರಿಗಳು ತಮ್ಮ ಗಿರಾಕಿಗಳನ್ನು ಕಳಕೊಂಡರು. ಕರ್ನಾಟಕ–ತಮಿಳುನಾಡು ಗಡಿಪ್ರದೇಶದ ಸಣ್ಣ ಪಟ್ಟಣಗಳಲ್ಲಿ ನಡೆಸಿದ ಒಂದು ಮರುಸರ್ವೆಯ ಪ್ರಕಾರ ವ್ಯಾಪಾರಗಳಲ್ಲಿ ಮಾರಾಟ ಆರಂಭದಲ್ಲಿ 80ಶೇ.ದ ವರೆಗೂ ಇಳಿಯಿತು. ಡಿಸೆಂಬರ್ ಕೊನೆಯ ಹೊತ್ತಿಗೆ ಮಾರಾಟ ಭಾಗಶಃ ಸುಧಾರಿಸಿದರೂ, ಈಗಲೂ 30ಶೇ.ದಷ್ಟು ಇಳಿಕೆಯಿದೆ.

**ಇದು ಅತಿ ಹೆಚ್ಚಾಗಿ ತಟ್ಟಿರುವುದು ಅಸಂಘಟಿತ ವಲಯವನ್ನು.** ಮೀನುಗಾರರು, ತೋಟ ಕಾರ್ಮಿಕರು, ಆಭರಣ ತಯಾರಿ, ರೇಶ್ಮೆ ನೇಯ್ಗೆ, ಪಾದರಕ್ಷೆ ತಯಾರಿಕೆ ಮುಂತಾದ ಘಟಕಗಳ ಕಾರ್ಮಿಕರ ಜೀವನಾಧಾರಗಳ ಮೇಲೇ ಭಾರೀ ದುಷ್ಪರಿಣಾಮ ಉಂಟಾಗಿದೆ.

ಅಸಂಘಟಿತ ವಲಯ ನೋಟು ರದ್ದತಿಯ ಅತಿ ಹೆಚ್ಚಿನ ದುಷ್ಪರಿಣಾಮಗಳನ್ನು ಹೊರಬೇಕಾಗಿ ಬರುತ್ತದೆ ಸೆಂಟ್ರಮ್ ವೆಲ್ತ್ ರಿಸರ್ಚ್ ಎಂಬ ಸಂಸ್ಥೆ ತನ್ನ ವರದಿಯಲ್ಲಿ ಹೇಳುತ್ತಿದೆ.

ಬನಾರಸ್ ವಸ್ತ್ರ ಉದ್ಯೋಗ ಸಂಘದ ಮುಖ್ಯಸ್ಥರು ತಮ್ಮ ವ್ಯಾಪಾರದಲ್ಲಿ 70ಶೇ.ದಷ್ಟು ಇಳಿಕೆಯಾಗಿದೆ, ಸಾವಿರಾರು ನೇಕಾರರು ಉದ್ಯೋಗ ಕಳಕೊಂಡಿದ್ದಾರೆ, ಏಕೆಂದರೆ ಅವರಿಗೆ ಸಂಬಳ ಕೊಡಲು ತಮ್ಮ ಬಳಿ ಹಣ ಇಲ್ಲ ಎನ್ನುತ್ತಾರೆ. ಕೆಲವು ಮಂದಿ ತಮ್ಮ ಉಳಿತಾಯಗಳನ್ನು ಕಳಕೊಂಡಿದ್ದಾರೆ. ಕಾಯಿಲೆ, ಸಾವು ಇತ್ಯಾದಿ ಅನಿರೀಕ್ಷಿತ ಸಂದರ್ಭಗಳಿಗೆ ಬೇಕಾದೀತು ಎಂದು ಉಳಿಸಿದ ಹಣವೆಲ್ಲವನ್ನೂ ಕಳಕೊಳ್ಳಬೇಕಾಗಿ ಬಂದಿದೆ, ಏಕೆಂದರೆ ಅವರ ಬಳಿ ಬ್ಯಾಂಕ್ ಖಾತೆಗಳಿಲ್ಲ.

ಹಲವರು ತಾವು ಬ್ಯಾಂಕುಗಳಲ್ಲಿ ಉಳಿಸಿದ ಹಣವನ್ನು ಪಡೆಯಲಾಗದೆ ಒದ್ದಾಡುತ್ತಿದ್ದಾರೆ. ಶಾಲಾ ಶುಲ್ಕಗಳನ್ನು ಕಟ್ಟಲಾಗುತ್ತಿಲ್ಲ, ಆಸ್ಪತ್ರೆ ಬಿಲ್‌ಗಳನ್ನು ತೆರಲಾಗುತ್ತಿಲ್ಲ, ಸಾರಿಗೆ ವಚ್ಚಗಳಿಗೆ ಹಣ ದೊರೆಯುತ್ತಿಲ್ಲ, ತಿಂಗಳ ಬಿಲ್‌ಗಳನ್ನು, ತಿಂಗಳ ದಿನಸುಗಳನ್ನೂ ಕೂಡ ಖರೀದಿಸಲಾಗುತ್ತಿಲ್ಲ.

ಬುಡಕಟ್ಟು ಪ್ರದೇಶಗಳಲ್ಲಂತೂ ಪರಿಸ್ಥಿತಿ ಇನ್ನಷ್ಟು ಶೋಚನೀಯವಾಗಿದೆ. ಉದಾಹರಣೆಗೆ ನಂದುರ್ಬಾರ್‌ನ ಬುಡಕಟ್ಟು ಪ್ರದೇಶಗಳಲ್ಲಿ ನೋಟು ರದ್ದತಿಯ ಎರಡು ತಿಂಗಳ ನಂತರ ಈಗಲೂ ನಗದು ಸಿಗುತ್ತಿಲ್ಲ. ತ್ರಿಶೂಲ್ ಎಂಬ ಹಳ್ಳಿಯ ದರ್ಶಿಯಾ ಪವಾರಿಗೆ ಹತ್ತಿರದ ಬ್ಯಾಂಕ್ 15 ಕಿ.ಮೀ. ದೂರದಲ್ಲಿದೆ. ಮುಂಜಾನೆ 3 ಗಂಟೆಗೇ ಎದ್ದು 5 ಕಿ.ಮೀ. ನಡೆದು, ನಂತರ ಬೆಳಿಗ್ಯೆ 6 ಗಂಟೆಯ ಬಸ್ ಹಿಡಿದು ಅಲ್ಲಿಗೆ ತಲುಪಬೇಕಾಗಿದೆ. ಸರಕಾರದ ಘರಕುಲ್ ಯೋಜನಾದ ಫಲಾನುಭವಿಯಾದ ಈತ ಆ ಯೋಜನೆಯ ಅಡಿಯಲ್ಲಿ ಮನೆ ಕಟ್ಟಿಸಲು ಹಣ ಪಡೆಯಲಿಕ್ಕೆ ಹೀಗೆ ಪ್ರತಿದಿನ ಪಯಣಿಸಬೇಕು, ಆದರೆ ಆತನಿಗೆ ಬ್ಯಾಂಕಿನಿಂದ

2000ರೂ.ಗಿಂತ ಹೆಚ್ಚು ಸಿಗುವುದಿಲ್ಲ.

ಸರಕಾರ ಗ್ರಾಮೀಣ ಜನಗಳ ಅಗತ್ಯಗಳನ್ನು ದೊಡ್ಡ ಪ್ರಮಾಣದಲ್ಲಿ ಪೂರೈಸುವ ಸಹಕಾರಿಗಳಿಗೆ ಕರೆನ್ಸಿ ವಿನಿಮಯಕ್ಕೆ ಅನುಮತಿ ನಿರಾಕರಿಸಿದೆ. ಇದು ಹಳ್ಳಿಗಳಲ್ಲಿ ವಾಸಿಸುವ ಜನಗಳ ಸಂಕಷ್ಟಗಳನ್ನು ಮತ್ತಷ್ಟು ಹೆಚ್ಚಿಸಿದೆ.

ಕೇರಳದಲ್ಲಿ ಠೇವಣಿಗಳಲ್ಲಿ 60ಶೇ.ಕ್ಕಿಂತ ಹೆಚ್ಚು ಸಹಕಾರಿ ಬ್ಯಾಂಕುಗಳಲ್ಲಿವೆ. ಅವು 1.27ಲಕ್ಷ ಕೋಟಿ ರೂ.ಗಳಷ್ಟು ಠೇವಣಿಗಳನ್ನು ಹೊಂದಿವೆ ಎಂದು ಅಂದಾಜು ಮಾಡಲಾಗಿದೆ. ಇಲ್ಲಿ ಕೃಷಿ ಸಾಲದ 70ಶೇ.ದಷ್ಟು ನಾಲ್ಕು ಹಂತಗಳಿರುವ ಸಹಕಾರಿ ಬ್ಯಾಂಕ್ ವ್ಯವಸ್ಥೆಯ ಮೂಲಕವೇ ಆಗುತ್ತಿದೆ.

ಸಹಕಾರಿ ಬ್ಯಾಂಕುಗಳು ಜನಗಳ ಭಾಗವಹಿಸುವಿಕೆಯ ಮೂಲಕ ಪ್ರಜಾಸತ್ತಾತ್ಮಕವಾಗಿ ನಡೆಯುವ, ನಿರ್ವಹಣೆಯಾಗುತ್ತಿರುವ ವ್ಯವಸ್ಥೆ. ಕೇರಳ ಮುಂತಾದ ಹಲವು ರಾಜ್ಯಗಳಲ್ಲಿ ಅವು ಹಣಕಾಸು ಒಳಗೊಳ್ಳುವಿಕೆಯ ಸಂಕೇತಗಳು. ಆದರೆ ಕೇಂದ್ರ ಸರಕಾರ ಇವುಗಳಿಗೆ ನಗದು ಸಿಗದಂತೆ ಮಾಡಿದೆ. ಇದರ ಉದ್ದೇಶ ಅವುಗಳ ವ್ಯವಹಾರಗಳನ್ನು ಮುಚ್ಚಿಸಿ ಜನಗಳು ತಮ್ಮ ಠೇವಣಿಗಳನ್ನು ಹಿಂತೆಗೆದುಕೊಳ್ಳುವಂತೆ ಮಾಡುವುದು, ಅವರನ್ನು ಈ ಸಹಕಾರಿ ಬ್ಯಾಂಕುಗಳಿಂದ ದೂರ ಮಾಡಿ ಖಾಸಗಿ ಬ್ಯಾಂಕುಗಳತ್ತ ತಳ್ಳುವುದು.


## ಗಳಿಸಿಕೊಂಡವರು

ಪ್ರಧಾನ ಮಂತ್ರಿಗಳು ನೋಟು ರದ್ದತಿ "ಸಾರ್ವಜನಿಕ ಉಳಿತಾಯಗಳನ್ನು ಹೀರಿಕೊಳ್ಳುವುದು" ಎಂದು ಸೂಚಿಸಿದ್ದಾರೆ. ಅದು ನಿಜವೇ ಸರಿ. ನೋಟುರದ್ದತಿಯಿಂದಾಗಿ ಜನರು 500 ಮತ್ತು 1000 ರೂಪಾಯಿ ನೋಟುಗಳಲ್ಲಿದ್ದ ತಮ್ಮ ಹಣವನ್ನು ಬ್ಯಾಂಕುಗಳಲ್ಲಿ ಠೇವಣಿ ಇಡುವ ಬಲವಂತಕ್ಕೆ ಒಳಗಾಗಿದ್ದಾರೆ. ಇದರಿಂದ ಬ್ಯಾಂಕ್ ಠೇವಣಿಗಳಲ್ಲಿ ಅಪಾರ ಹೆಚ್ಚಳವಾಗಿದೆ. ಇದ್ದಕ್ಕಿದ್ದಂತೆ ಬ್ಯಾಂಕುಗಳ ಬ್ಯಾಲನ್ಸ್ ಶೀಟುಗಳು ಹೊಳೆಯುತ್ತಿವೆ. ಇದು ಸಪ್ಟಂಬರ್ 2016 ರಲ್ಲಿ ಇದ್ದ ಸನ್ನಿವೇಶಕ್ಕೆ ತದ್ವಿರುದ್ಧವಾಗಿದೆ. ಆಗ ಬ್ಯಾಂಕುಗಳಲ್ಲಿ 'ಕಾರ್ಯ ನಿರ್ವಹಿಸದ ಆಸ್ತಿ'(ಎನ್‌ಪಿಎ)ಗಳ ಅಂದರೆ ಶ್ರೀಮಂತರ ಸುಸ್ತಿ ಸಾಲಗಳ ಒಟ್ಟು ಪ್ರಮಾಣ 6.5ಲಕ್ಷ ಕೋಟಿ ರೂ.ಗಳಿಗಿಂತಲೂ ಹೆಚ್ಚಿತ್ತು. ಇವು ದೊಡ್ಡ ಕಾರ್ಪೊರೇಟ್‌ಗಳು ಸಾರ್ವಜನಿಕ ವಲಯದ ಬ್ಯಾಂಕುಗಳಿಂದ ಪಡೆದ ಸಾಲಗಳನ್ನು ಮರುಪಾವತಿ ಮಾಡದ್ದರಿಂದ ಉಂಟಾದವುಗಳು. ಕಾರ್ಪೊರೇಟ್‌ಗಳು ಆ ಸಾಲಗಳನ್ನು ತೀರಿಸುವಂತೆ ಬಲವಂತ ಮಾಡುವ ಬದಲು ಸರಕಾರ ಅವನ್ನು ಮನ್ನಾ ಮಾಡುವಂತೆ ಬ್ಯಾಂಕುಗಳ ಮೇಲೆ ಒತ್ತಡ ಹಾಕಿದೆ. ಇದು ಬ್ಯಾಂಕುಗಳನ್ನು ಬಿಕ್ಕಟ್ಟಿಗೆ ತಳ್ಳಿದೆ.


ಸುಸ್ತಿ ಸಾಲಗಳ ಮಾಹಿತಿಗಳನ್ನು ಸಂಗ್ರಹಿಸಲು ಬ್ಯಾಂಕುಗಳು ರಚಿಸಿದ ಭಾರತದ ಸಾಲಮಾಹಿತಿ ಬ್ಯೂರೋ'(ಸಿಬಿಲ್) ಕಂಪನಿ ದೇಶದಲ್ಲಿ 5,275 'ಉದ್ದೇಶಪೂರ್ವಕವಾಗಿಯೇ ಸುಸ್ತಿದಾರರಾಗಿರುವವರು' ಇದ್ದಾರೆ ಎಂದು ವರದಿ




ನೋಟುನಿಷೇಧದಿಂದ
ಗಳಿಸಿಕೊಂಡವರು




ವ್ಯಂಗ್ಯಚಿತ್ರ:
ಕೇಶವ್,ದಿ ಹಿಂದು




ನೋಟುನಿಷೇಧದಿಂದ
ಗಳಿಸಿಕೊಂಡವರು

ಮಾಡಿದೆ. ಇವರು ಭಾರತೀಯ ಬ್ಯಾಂಕುಗಳಿಗೆ ತೀರಿಸಬೇಕಾಗಿರುವ ಸಾಲದ ಮೊತ್ತ ರೂ.56,521 ಕೋಟಿ ರೂ. ಕಳೆದ ಕೇಂದ್ರ ಬಜೆಟಿನಲ್ಲಿ ಕೃಷಿ ಮತ್ತು ರೈತರ ಕಲ್ಯಾಣಕ್ಕೆ ಒದಗಿಸಿದ ಹಣ ರೂ. 35,984 ಕೋಟಿ. ಅಂದರೆ ಉದ್ದೇಶಪೂರ್ವಕವಾಗಿ ಸುಸ್ತಿದಾರರಾಗಿರುವ ಕಾರ್ಪೊರೇಟ್‌ಗಳ ಸಾಲದ ಮೊತ್ತ ಇದರ ಒಂದೂವರೆ ಪಟ್ಟು!

**ಈಗ ನೋಟು ರದ್ದತಿಯ ಮೂಲಕ ಬ್ಯಾಂಕುಗಳಿಗೆ ಕಾರ್ಪೊರೇಟ್‌ಗಳು ಉಂಟು ಮಾಡಿರುವ ಈ ನಷ್ಟಗಳನ್ನು ಭರ್ತಿ ಮಾಡಲು ಜನಗಳ ಠೇವಣಿಗಳನ್ನು ಬಳಸುವ ಆಶಯವನ್ನು ಹೊಂದಿದೆ. ಅಂದರೆ ಹಣಃವನ್ನು ಬಡವರಿಂದ ಶ್ರೀಮಂತರಿಗೆ ವರ್ಗಾಯಿಸುವುದು!**

ನಮ್ಮ ರೈತರು, ರಿಕ್ಷಾಚಾಲಕರು ಅಥವ ಇತರ ಸ್ವಉದ್ಯೋಗಿ ವ್ಯಕ್ತಿಗಳು ಹೀಗೆ ಸಾಲಗಳನ್ನು ತೀರಿಸದಿದ್ದರೆ ಏನಾಗುತ್ತಿತ್ತು ಊಹಿಸಿ. ತೀವ್ರ ಕೃಷಿ ಬಿಕ್ಕಟ್ಟಿನಿಂದ ನರಳುತ್ತಿರುವ ರೈತರ ಒಟ್ಟು 70,000 ಕೋಟಿ ರೂ.ಗಳಷ್ಟು ಸಾಲಗಳನ್ನು ಮನ್ನಾ ಮಾಡಲು ನಿರಾಕರಿಸುತ್ತಿರುವ ಸರಕಾರ ಕಾರ್ಪೊರೇಟ್‌ಗಳು ಬೇಕೆಂದೇ ಬಾಕಿಯಿಟ್ಟುಕೊಂಡಿರುವ ಲಕ್ಷ– ಕೋಟ್ಯಂತರ ಸಾಲಗಳನ್ನು ಮನ್ನಾ ಮಾಡಲು ಸಿದ್ಧವಾಗಿದೆ!

2013ರಿಂದ 2015ರ ನಡುವೆ ಸರಕಾರೀ ಒಡೆತನದ 29 ಬ್ಯಾಂಕುಗಳು ಒಟ್ಟು 1.14ಲಕ್ಷ ಕೋಟಿ ರೂ.ಗಳ ಕೆಟ್ಟ ಸಾಲಗಳನ್ನು ಅಂದರೆ ಹಿಂದಿರುಗಿ ಬರಲಾರದೆಂದು ನಿರ್ಧರಿಸಿದ ಸಾಲಗಳನ್ನು ದಾಖಲೆಗಳಿಂದ ತೆಗೆದಿದೆ. ಇದು ಹಿಂದಿನ 9 ವರ್ಷಗಳಲ್ಲಿ ಮಾಡಿದ್ದಕ್ಕಿಂತಲೂ ಹೆಚ್ಚು.

ಹೀಗೆ ಸಾಲ ಹಿಂದಿರುಗಿಸದ ಮಹಾ ಕಾರ್ಪೊರೇಟ್ ಕುಳಗಳ ಪಟ್ಟಿಯತ್ತ ಕಣ್ಣು ಹಾಯಿಸಿ:

* ಮುಕೇಶ್ ಅಂಬಾನಿಯ ರಿಲಯಂಸ್ ಇಂಡಸ್ಟ್ರಿಸ್: ರೂ. 1,87,079 ಕೋಟಿ
* ಅನಿಲ್ ಅಂಬಾನಿಯ ರಿಲಯಂಸ್ ಗುಂಪು: ರೂ. 1,25,000 ಕೋಟಿ
* ಅನಿಲ್ ಅಗರ್‌ವಾಲ್‌ನ ವೇದಾಂತ :ರೂ. 1,03,000 ಕೋಟಿ
* ಶಶಿ ಮತ್ತು ರವಿ ರುಯಾ ಗಳ ಎಸ್ಸಾರ್ ಗುಂಪು: ರೂ. 1,01,461 ಕೋಟಿ
* ಗೌತಮ್ ಅದಾನಿಯ ಅದಾನಿ ಗುಂಪು: ರೂ.96,031 ಕೋಟಿ
* ಮನೋಜ್ ಗೌರ್‌ನ ಜೇಪೀ ಗುಂಪು: ರೂ. 75,163 ಕೋಟಿ
* ಟಾಟಾ ಗುಂಪು : ರೂ. 72,867 ಕೋಟಿ
* ಸಜ್ಜನ್ ಜಿಂದಾಲ್‌ನ ಜೆಎಸ್‌ಡಬ್ಲ್ಯು ಗುಂಪು: ರೂ. 58,171 ಕೋಟಿ
* ಜಿ ಎಂ ರಾವ್‌ನ ಜಿಎಂಆರ್ ಗುಂಪು: 47,976 ಕೋಟಿ
* ಎಲ್. ಮಧುಸೂದನ ರಾವ್ ಲಂಕೋ ಗುಂಪು: ರೂ. 47,102 ಕೋಟಿ

* ವೇಣುಗೋಪಾಲ್ ಧೂತ್‌ನ ವಿಡಿಯೋಕೋನ್ ಗುಂಪು:
ರೂ. 45,.405 ಕೋಟಿ

* ಜಿವಿಕೆ ರೆಡ್ಡಿಯ ಜಿವಿಕೆ ಗುಂಪು: ರೂ. 33,933 ಕೋಟಿ

ನೋಟು ರದ್ದತಿಯು ಅಘೋಷಿತ ಆಶಯ–ಬ್ಯಾಂಕುಗಳನ್ನು ಕಾರ್ಪೊರೇಟ್‌ಗಳಿಗೆ ಕೊಟ್ಟ ಈ ಬೇಜವಾಬ್ದಾರಿ ಸಾಲಗಳ ಸುಸ್ತಿಗಳಿಂದ ಅವನ್ನು ಉಳಿಸುವುದು. 2008 ರ ಜಾಗತಿಕ ಆರ್ಥಿಕ ಬಿಕ್ಕಟ್ಟಿನ ನಂತರ ಭಾರತ ಸರಕಾರ ಏನೇ ಆಗಲಿ ಬ್ಯಾಂಕುಗಳನ್ನು ಅವು ವಿಫಲವಾಗದಂತೆ ಉಳಿಸಬೇಕು ಎನ್ನುವ ಒಂದು ಜಾಗತಿಕ ಪ್ರಯತ್ನದ ಭಾಗವಾಗಿದೆ. ಆದ್ದರಿಂದ ಈ ಸರಕಾರ ಕಾರ್ಪೊರೇಟ್‌ಗಳಿಗೆ ಸಾಲ ಕೊಟ್ಟ ಈ ಬ್ಯಾಂಕುಗಳು ಅದರಿಂದ ಕುಸಿಯದಂತೆ ಉಳಿಸಲು ಹಣವನ್ನು ಬಡವರಿಂದ 'ಹೀರಿಕೊಂಡು' ಶ್ರೀಮಂತರಿಗೆ ವರ್ಗಾಯಿಸಬೇಕು. ಇದನ್ನು ನೋಟು ರದ್ಧತಿಯ ಮೂಲಕ ಸಾಧಿಸುವುದು ಸರಕಾರದ ಆಶಯ.

**ಹೀಗೆ ನೋಟುರದ್ಧತಿಯಿಂದ ಪ್ರಯೋಜನ ಗಳಿಸಿದವರ ಪಟ್ಟಿಯಲ್ಲಿ ಮೊದಲು ಈ ಭಾರತೀಯ ಕಾರ್ಪೊರೇಟ್‌ಗಳು ಬರುತ್ತವೆ.**

## ನಗದುರಹಿತ ಆರ್ಥಿಕ ಅಥವ ಡಿಜಿಟಲ್ ಆರ್ಥಿಕ– ಅಂತರ್‍ರಾಷ್ಟ್ರೀಯ ಹಣಕಾಸು ಕಾರ್ಪೊರೇಟ್‌ಗಳ ಲಾಭಕ್ಕಾಗಿ

ಹಣಕಾಸು ಮಂತ್ರಿ ಡಿಸೆಂಬರ್ 8ರಂದು "ಭಾರತ ಸರಕಾರಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ, ಪೇಪರ್ ಕರೆನ್ಸಿಯ ಪ್ರಮಾಣ ಇಳಿಯಬೇಕು, ಬಿಸಿನೆಸ್‌ಗಳ ಬಹಳಷ್ಟು ಭಾಗ ಪರ್ಯಾಯವಾದ ಡಿಜಿಟಲ್ ಅಥವ ಚೆಕ್ ವಿಧಾನದಲ್ಲಿರಬೇಕು ಎಂಬುದು ನಮ್ಮ ಆಶಯಗಳಲ್ಲಿ ಒಂದು ಎಂಬುದು ಸ್ವಯಂವೇದ್ಯ" ಎಂದಿದ್ದರು. ಡಿಸೆಂಬರ್ 29ರಂದು ಅವರು ಇದನ್ನು ಮತ್ತೆ ಹೇಳಿದರು.

ನಗದುರಹಿತ ಅಥವ ಡಿಜಿಟಲ್ ಆರ್ಥಿಕಕ್ಕೆ ದಿಲೆಕ್ಟ್ರಾನಿಕ್ ಸಾಧನಗಳ ಮೂಲಕ ನಡೆಯುವ ಆರ್ಥಿಕ ವಯವಸ್ಥೆಯಾಗಿ ಪರಿವರ್ತನೆಯಾಗುವ ಭಾರತದ ಮಾರುಕಟ್ಟೆಯ ಮೌಲ್ಯ 2020ರ ವೇಳೆಗೆ 550 ಶತಕೋಟಿ ಡಾಲರುಗಳು(3.4ಲಕ್ಷ ಕೋಟಿ ರೂ.ಗಳು) ಎಂದು ಅಂದಾಜು ಮಾಡಲಾಗಿದೆ. ಇದು ವಿಸಾ, ಮಾಸ್ಟರ್‌ಕಾರ್ಡ್‌ನಂತಹ ಕಾರ್ಡ್ ಕಂಪನಿಗಳಿಗೆ ಮತ್ತು ಹಲವು ಅಂತರ್‍ರಾಷ್ಟ್ರೀಯ ಹಣಕಾಸು ಸಂಸ್ಥೆಗಳಿಗೆ ಕೂಡ ದಕ್ಕುವ ಮಾರುಕಟ್ಟೆ. ಭಾರತದಲ್ಲಿ ಡಿಜಿಟಲ್ ಆರ್ಥಿಕಕ್ಕೆ ಇಷ್ಟೊಂದು ದೊಡ್ಡ ಮಾರುಕಟ್ಟೆ ಇರುವುದರಿಂದಲೇ ಅಮೆರಿಕ ಮತ್ತು ಚೀಣಾದಿಂದ ಅಪಾರ ಹೂಡಿಕೆಗಳು ಹಣಕಾಸು ವ್ಯವಹಾರದ ಬಿಸಿನೆಸ್‌ಗೆ ಪ್ರವೇಶಿಸುತ್ತಿವೆ.

ನಮ್ಮ ದೇಶದಲ್ಲಿ ನೋಟುರದ್ಧತಿಯನ್ನು ಪ್ರಕಟಿಸಿದ ಕೂಡಲೇ ಅದನ್ನು ಸ್ವಾಗತಿಸಿದ ಮೊದಲಿಗರಲ್ಲಿ ವಿಸಾ ಮತ್ತು ಮಾಸ್ಟರ್‌ಕಾರ್ಡ್‌ಗಳಿದ್ದವು ಎಂಬುದನ್ನು

ಗಮನಿಸಬೇಕು. ನಿಜಸಂಗತಿಯೆಂದರೆ, ನವಂಬರ್ ಅಂತ್ಯದ ವೇಳೆಗೆ ಈ ಎರಡು ಜಾಲಗಳು ನಮ್ಮ ದೇಶವನ್ನು ಈ ರೀತಿಯ ಬದಲಾವಣೆಯತ್ತ ತಳ್ಳಲಾರಂಭಿಸಿದವು ಎಂದು ಮಾಧ್ಯಮಗಳು ವರದಿ ಮಾಡಿವೆ. ಇದು ಆಶ್ಚರ್ಯಕರ ಸಂಗತಿಯೇನೂ ಅಲ್ಲ. ಈ ಎರಡೂ ಜಾಲಗಳಿಗೆ ನೋಟುರದ್ಧತಿಯಿಂದ ಬಹಳಷ್ಟು ಗಳಿಕೆಯಾಗಿದೆ. ಕೆಲವು ವರದಿಗಳ ಪ್ರಕಾರ "ಈ ಅವಧಿಯಲ್ಲಿ 1.58 ಕೋಟಿ ಮಾಸ್ಟರ್‌ಕಾರ್ಡ್ ಡೆಬಿಟ್ ಕಾರ್ಡ್‌ಗಳನ್ನು ಬಳಸಲಾಯಿತು. ಇದು ನವಂಬರ್‌ನ 1 ರಿಂದ 8 ರವರೆಗಿನ ಬಳಕೆಗೆ ಹೋಲಿಸಿದರೆ 76.84 ಶೇ.ದಷ್ಟು ಹೆಚ್ಚು. ಮಾಸ್ಟರ್‌ಕಾರ್ಡ್ ಕ್ರೆಡಿಟ್ ಕಾರ್ಡ್‌ಗಳ ವ್ಯವಹಾರಗಳಲ್ಲಿ 24ಶೇ.ದಷ್ಟು ಹೆಚ್ಚಳವಾಗಿ ಅದು 57.31 ಲಕ್ಷಕ್ಕೆ ಏರಿತು. 'ವಿಸಾ'ದ ಡೆಬಿಟ್ ಕಾರ್ಡ್ ಮತ್ತು ಪ್ರಿ–ಪೈಡ್ ವ್ಯವಹಾರಗಳಲ್ಲಿ 93ಶೇ. ಹೆಚ್ಚಳವಾಯಿತು." ನಮ್ಮ ಪ್ರತಿಯೊಂದು ವಿಸಾ ಮತ್ತು ಮಾಸ್ಟರ್‌ಕಾರ್ಡ್ ವ್ಯವಹಾರದಿಂದ 2–3ಶೇ. ವ್ಯವಹಾರ ಶುಲ್ಕ ಈ ಎರಡು ಅಮೆರಿಕನ್ ಕಾರ್ಪೊರೇಟ್‌ಗಳಿಗೆ ಸಿಗುತ್ತವೆ. ಅಂದರೆ ಎಷ್ಟು ಲಕ್ಷ ಕೋಟಿ ರೂಪಾಯಿಗಳು ನಮ್ಮಿಂದ ಅಮೆರಿಕಾಕ್ಕೆ ಹರಿದು ಹೋಗುತ್ತದೆ ಎಂಬುದನ್ನು ಊಹಿಸಿ.

ಅದೇ ರೀತಿಯಲ್ಲಿ ಪೇಟಿಎಂ ಬಳಸುವವರ ಸಂಖ್ಯೆ ಈ ಅವಧಿಯಲ್ಲಿ 17 ಕೋಟಿಯಷ್ಟು ಹೆಚ್ಚಿ ಅದಕ್ಕೆ ಸೂಪರ್ ಲಾಭಗಳನ್ನು ಒದಗಿಸಿದೆ. ಕಳೆದ ಎರಡು ತಿಂಗಳೊಳಗೆ ತನ್ನ ವ್ಯವಹಾರಗಳು ಬಹಳಷ್ಟ ವಿಸ್ತರಿಸಿವೆ ಎಂದು ಆ ಕಂಪನಿಯೇ ಪ್ರಕಟಿಸಿದೆ. ಪ್ರತಿದಿನ 70ಲಕ್ಷ ವ್ಯವಹಾರಗಳು ಅದರ ಮೂಲಕ ನಡೆಯುತ್ತಿವೆಯಂತೆ. ಅಂದರೆ ಸುಮಾರು 250ಶೇ. ಹೆಚ್ಚಳ. ಇಂತಹ ಸೂಪರ್‌ಲಾಭಗಳನ್ನು ಗಿಟ್ಟಿಸಲು ಅವಕಾಶ ಕಲ್ಪಿಸಿದ್ದಕ್ಕೆ ಕೃತಜ್ಞತೆ ಸಲ್ಲಿಸಲೆಂದೇ ಪೇಟಿಯಂ ತನ್ನ ಜಾಹೀರಾತಿನಲ್ಲಿ ಮೋದಿಯವರ ಫೋಟೋವನ್ನು ಹಾಕಿಕೊಂಡದ್ದು.

ಪೇಟಿಎಂ ನೊಂದಿಗೆ ಇತರ ಡಿಜಿಟಲ್ ವ್ಯಾಲೆಟ್(ಇಲೆಕ್ಟ್ರಾನಿಕ್ ಜೋಳಿಗೆ?) ಕಂಪನಿಗಳು ಕೂಡ ಮಾರುಕಟ್ಟೆ ಪ್ರವೇಶಿಸಿವೆ. ಜಪಾನೀ ಹೂಡಿಕೆದಾರರು ಮತ್ತು ಟ್ರೇಲೈನ್‌ಏಶ್ಯ ಎಂಬಂತಹ ಹೆಜ್‌ಫಂಡ್(ಪಣಭದ್ರ) ಕಂಪನಿಗಳು ಮೊಬಿಕ್ವಿಕ್ ಎಂಬ ಡಿಜಿಟಲ್ ಜೋಳಿಗೆ ಕಂಪನಿಗೆ ಈ ಅವಧಿಯಲ್ಲೇ 155 ಕೋಟಿ ರೂ ಎತ್ತಿವೆಯಂತೆ. ಇನ್ನೊಂದು ಫ್ರೀಚಾರ್ಜ್ ಎಂಬ ಕಂಪನಿಯ ದೈನಂದಿನ ವ್ಯವಹಾರಗಳಲ್ಲಿ 12 ಪಟ್ಟು ಹೆಚ್ಚಳವಾಗಿದೆಯಂತೆ. ಈ ಕಂಪನಿಯನ್ನು ಸ್ನಾಪ್‌ಡೀಲ್ ಎಂಬ ಇ–ಕಾಮರ್ಸ್ ( ಅಂದರೆ ಇಲೆಕ್ಟ್ರಾನಿಕ ಮಾದ್ಯಮಗಳ ಮೂಲಕ ವ್ಯಾಪಾರ ನಡೆಸುವ) ಕಂಪನಿ ಖರೀದಿಸಿತು. ಅಮೆರಿಕನ್ ಎಕ್ಸ್‌ಪ್ರೆಸ್, ಸಿಸ್ಕೊ ಮತ್ತು ಕೆಲವು ಚೀನೀ ಹೂಡಿಕೆದಾರರು ಇದಕ್ಕೆ ಹಣ ಹಾಕಿದ್ದಾರೆ.

ಭಾರತ ಸರಕಾರ ಯುಎಸ್‌ಏಡ್, ವಿಸಾ, ಮಾಸ್ಟರ್‌ಕಾರ್ಡ್, ಸಿಟಿ ಮತ್ತು ಇತರ ಹಲವು ಕಾರ್ಪೊರೇಟ್‌ಗಳೊಂದಿಗೆ ಭಾಗೀದಾರಿಕೆಗೆ ಇಳಿದಿದೆ. ಇವನ್ನೆಲ್ಲ ಒಟ್ಟಾಗಿ 'ಬೆಟರ್ ದೇನ್ ಕ್ಯಾಶ್ ಅಲಯಂಸ್'(ಅಂದರೆ, ನಗದಿಗಿಂತ ಉತ್ತಮ ಮಿತ್ರಕೂಟ) ಎಂದು ಹೆಸರಿಸಲಾಗಿದೆ. ಈ ಮಿತ್ರಕೂಟದ ಭಾಗವಾಗಿ ಯುಎಸ್‌ಏಡ್ ನಮ್ಮ ದೇಶದಲ್ಲಿ ಜುಲೈ–ಸಪ್ಟಂಬರ್ 2015ರಲ್ಲಿ ಒಂದು ಸಂಶೋಧನೆ ನಡೆಸಿತು.

ಅದರ ಉದ್ದೇಶ ಡಿಜಿಟಲ್ ಪಾವತಿಗಳ ಬಳಕೆಯನ್ನು, ವಿಶೇಷವಾಗಿ ಕಡಿಮೆ ಆದಾಯದ ಬಳಕೆದಾರರ ನಡುವೆ ಹೆಚ್ಚಿಸಲು ಆಧಾರವನ್ನು ಸಿದ್ಧಪಡಿಸುವುದು. **ಬಹುಶಃ ಇವೆಲ್ಲ ನವಂಬರ್ 8ರ ಭವ್ಯ ಪ್ರಕಟಣೆಗೆ ಮಾಡಿದ್ದ ಆಮೂಲಾಗ್ರ ಸಿದ್ಧತೆಗಳಿರಬೇಕು.**

" ಕಪ್ಪುಹಣದ ಹರಿವನ್ನು ತಡೆಯಲು ಒಂದು ದಾರಿಯೆಂದರೆ ನಗದು ವ್ಯವಹಾರಗಳನ್ನು ನಿರುತ್ತೇಜಿಸುವುದು. ಈಗ ಬಹುಪಾಲು ಭಾರತೀಯರು 'ರುಪೇ' ಡೆಬಿಟ್ ಕಾರ್ಡ್ ಹೊಂದಿರುವುದರಿಂದ, ಅಥವ ಹೊಂದಬಹುದಾದ್ದರಿಂದ, ನಾನು, ಕ್ರೆಡಿಟ್ ಕಾರ್ಡ್ ಅಥವ ಡೆಬಿಟ್ ಕಾರ್ಡ್ ವ್ಯವಹಾರಗಳನ್ನು ಉತ್ತೇಜಿಸಲು ಮತ್ತು ನಗದು ವ್ಯವಹಾರಗಳನ್ನು ನಿರುತ್ತೇಜಿತಗೊಳಿಸಲು ಬೇಗನೇ ಹಲವು ಕ್ರಮಗಳನ್ನು ಸೂಚಿಸುತ್ತೇನೆ" ಎಂದು ಹಣಕಾಸು ಮಂತ್ರಿಗಳು 2015–16ರ ಬಜೆಟ್ ಭಾಷಣದಲ್ಲಿ ಹೇಳಿದ್ದರು.

ಅಲ್ಲದೆ, ಹಣಕಾಸು ಮಂತ್ರಾಲಯ ಇಲೆಕ್ಟ್ರಾನಿಕ್ ಸಾಧನಗಳ ಮೂಲಕ ವ್ಯವಹಾರಗಳಿಗೆ ಸೌಲಭ್ಯ ಕಲ್ಪಿಸುವ ಕರಡು ಸೂಚನೆಗಳ ಬಗ್ಗೆ ಜೂನ್ 2015 ರ ವರೆಗೆ ಸಾರ್ವಜನಿಕ ಅಭಿಪ್ರಾಯಗಳನ್ನು ಕಳಿಸಬೇಕು ಎಂಬ ಒಂದು ಬಹಿರಂಗ ಕರೆಯನ್ನು ತನ್ನ ವೆಬ್‌ತಾಣದಲ್ಲಿ ಕೊಟ್ಟಿತ್ತು. ಮತ್ತು ಸರಕಾರದ ಪ್ರಿಯ ಯೋಜನೆ ವಿಶ್ವ ಬ್ಯಾಂಕ್ ಬೆಂಬಲಿತ 'ಡಿಜಿಟಲ್ ಇಂಡಿಯ' ಕೂಡ ಡಿಜಿಟಲ್ ಆರ್ಥಿಕದತ್ತ ಪಲ್ಲಟದ ಮಾತು ಆಡುತ್ತದೆ. ಅಂದರೆ ಇಂದು ನಮ್ಮ ದೇಶದಲ್ಲಿ ನಡೆಯುತ್ತಿರುವುದು ಒಂದು ಚೆನ್ನಾಗಿ ಯೋಚಿಸಿ ರೂಪಿಸಿದ ಯೋಜನೆಯಾಗಿ ಕಾಣುತ್ತದೆ.

ನೋಟುರದ್ಧತಿ , ಅದರ ಜೊತೆಗೆ ಡಿಜಿಟಲ್ ಆರ್ಥಿಕದತ್ತ ಪಲ್ಲಟದ ಮಾತು ಜನಗಳು ಉಳಿತಾಯ ಮಾಡದಂತೆ ನಿರುತ್ತೇಜಿತಗೊಳಿಸುವ ಆಶಯವನ್ನೂ ಹೊಂದಿವೆ ಇವು ಜನಗಳನ್ನು ಹೆಚ್ಚೆಚ್ಚು ಖರ್ಚು ಮಾಡುವತ್ತ ಅಥವ ಕೊಳ್ಳುಬಾಕತನದತ್ತ ತಳ್ಳುವ ಆಶಯಗಳು.

ಡಿಜಿಟಲ್ ಆರ್ಥಿಕದತ್ತ ಪಲ್ಲಟ ನಮ್ಮ ಹಣಕಾಸು ವಲಯದಲ್ಲಿ ವಿದೇಶಿ ಕಾರ್ಪೊರೇಟ್‌ಗಳ ಪ್ರವೇಶಕ್ಕೆ ನೆರವಾಗುವ ಆಶಯವನ್ನೂ ಹೊಂದಿದೆ. ಇದನ್ನು ನಮ್ಮ ಆರ್ಥಿಕವನ್ನು ವಿದೇಶಿ ಬಂಡವಾಳಕ್ಕೆ ಇನ್ನಷ್ಟು ತೆರೆಯುವತ್ತ ಮೊದಲ ಹೆಜ್ಜೆಯಾಗಿ ಕಾಣಲಾಗುತ್ತಿದೆ. ಡಿಜಿಟಲ್ ಆರ್ಥಿಕದ ಬೆಳವಣಿಗೆ ಇ– ವಾಣಿಜ್ಯ ಅಂದರೆ ಅಂತರ್ಜಾಲದ ಮೂಲಕ ವ್ಯಾಪಾರದ ಬೆಳವಣಿಗೆಗೂ ನೆರವಾಗುತ್ತದೆ. ಅಂದರೆ ಅಮೆಝೋನ್ ಮುಂತಾದ ದೈತ್ಯ ಇ–ವಾಣಿಜ್ಯ ಕಂಪನಿಗಳಿಗೂ ಈ ಡಿಜಿಟಲ್ ಆರ್ಥಿಕದತ್ತ ಪಲ್ಲಟ ಬಹಳಷ್ಟು ಪ್ರಯೋಜನಗಳನ್ನು ಖಂಡಿತಾ ಒದಗಿಸುತ್ತದೆ.

"ಡಿಜಿಟಲ್ ಪಾವತಿಗಳು ಅನೌಪಚಾರಿಕ ಆರ್ಥಿಕದ ಆಕಾರವನ್ನು ಕುಗ್ಗಿಸಿ ಕಂಪನಿಗಳ ಆದಾಯವನ್ನು ಮತ್ತಷ್ಟು ಹೆಚ್ಚಸಬಹುದು... ದೀರ್ಘಾವಧಿಯಲ್ಲಿ, ಡಿಜಿಟಲ್ ಪಾವತಿಗಳು ಇ–ವಾಣಿಜ್ಯದ ಮತ್ತು ಆನ್–ಡಿಮಾಂಡ್ ಸೇವೆಗಳ

ಬೆಳವಣಿಗೆಯನ್ನು ಸಾಧ್ಯಗೊಳಿಸುತ್ತವೆ.. ಈ ಮೂಲಕ ಇ–ವಾಣಿಜ್ಯ ಬಳಕೆದಾರರು ಹೆಚ್ಚೆಚ್ಚು ಖರ್ಚು ಮಾಡುವ ಪ್ರಕ್ರಿಯೆಯನ್ನು ತೆರೆದು ಕೊಡುವುದಕ್ಕೆ ಕೀಲಿಕೈ ಆಗಬಹುದು" ಎಂದು ಸಪ್ಟಂಬರ್ 2016ರ ಮೆಕಿನ್ಸೆ ವರದಿ ಹೇಳುತ್ತದೆ.


ಕಂಪ್ಯೂಟರ್ ಮತ್ತು ಇಂಟರ್‌ನೆಟ್ ಮೂಲಕ ಪಾವತಿ ಅಥವ ಡಿಜಿಟಲ್ ಪಾವತಿ ಆಧುನಿಕ ಮೂಲರಚನೆಯ ಒಂದು ಮಹತ್ವಪೂರ್ಣ ಲಕ್ಷಣ ಎಂದು ಪರಿಗಣಿಸಲಾಗಿದೆ. ನಾವು ನಮ್ಮ ಹಣವನ್ನು ಹೇಗೆ ಖರ್ಚು ಮಾಡುತ್ತೇವೆ ಎಂಬುದನ್ನು ತಿಳಿಯುವುದು ಆಧುನಿಕ ಕಾರ್ಪೊರೇಟ್‌ಗಳಿಗೆ ಅಗತ್ಯವಾಗಿದೆ. ನಮ್ಮ ಹಣವನ್ನು ಹೇಗೆ ಖರ್ಚು ಮಾಡುತ್ತೇವೆ ಮತ್ತು ಯಾವ ಉತ್ಪನ್ನಗಳ ಮೇಲೆ ಖರ್ಚು ಮಾಡುತ್ತೇವೆ ಎಂದು ತಿಳಿದಾಗ ಅವರಿಗೆ ನಮ್ಮ ಮಾರುಕಟ್ಟೆ ಆಯ್ಕೆಗಳ ಮೇಲೆ ಪ್ರಭಾವ ಬೀರುವುದು ಸುಲಭವಾಗುತ್ತದೆ. ನಮ್ಮ ನಿರ್ದಿಷ್ಟ ಆಸಕ್ತಿಗಳು ಮತ್ತು ಅಪೇಕ್ಷೆಗಳಿಗೆ ಹೊಂದುವ ಜಾಹಿರಾತುಗಳನ್ನು ಅವು ಸಿದ್ಧಪಡಿಸಬಹುದು. ಕಾರ್ಪೊರೇಟ್‌ಗಳು ಕಾರ್ಡ್‌ಗಳ ಮೂಲಕ ನಾವು ಹಣ ಖರ್ಚು ಮಾಡುವ ಮಾಹಿತಿಯನ್ನು ಬಳಸಿ ಕಾರ್ಪೊರೇಟ್‌ಗಳು ನಮ್ಮ ವರ್ತನೆಯ ವಿಧಾನಗಳನ್ನು ಅಧ್ಯಯನ ಮಾಡುತ್ತವೆ ಮತ್ತು ಅವರ ಉತ್ಪನ್ನಗಳನ್ನು ಖರೀದಿಸುವತ್ತ ನಮ್ಮನ್ನು ತಳ್ಳುತ್ತವೆ.

ಭಾರತದಲ್ಲಿ ಇದನ್ನು ನಮ್ಮ ಬ್ಯಾಂಕ್ ಖಾತೆಗಳು(ಬಹುಪಾಲು ಭಾರತೀಯರಿಗೆ 'ಜನಧನ್' ಖಾತೆಗಳು) , ಆಧಾರ್ ಕಾರ್ಡ್ ಮತ್ತು ಮೊಬೈಲ್ ಸಂಪರ್ಕವನ್ನು ಜೋಡಿಸುವ ಮೂಲಕ ಸಾಧಿಸಬಹುದು. ಯುಎಸ್‌ಏಡ್ ಇದನ್ನು ಪ್ರೀತಿಯಿಂದ 'ಜಾಮ್'(ಜೆಎಎಂ– ಅಂದರೆ ಜನಧನ, ಆಧಾರ್ ಮತ್ತು ಮೊಬೈಲ್) ಎಂದು ಕರೆಯುತ್ತದೆ. ಅಂದರೆ ಎಲ್ಲರಿಗೂ ಖಾತೆ(ಜನಧನ್) ತೆರೆಯುವುದು, ಆಧಾರ್ ಅನ್ನು ಮಾಹಿತಿ ಸಂಗ್ರಹಿಸಲು ಬಳಸುವುದು ಮತ್ತು ಮೊಬೈಲನ್ನು ಡಿಜಿಟಲ್ ಆರ್ಥಿಕವನ್ನು ತೂರಿಸಲು ಬಳಸುವುದು. ಇವೆಲ್ಲವೂ ಕಾರ್ಪೊರೇಟ್‌ಗಳ ಸೇವೆಯಲ್ಲಿ ಎಂದು ಬೇರೆ ಹೇಳಬೇಕಾಗಿಲ್ಲ. ನಮ್ಮ ಸರಕಾರ, ಸುಪ್ರಿಂ ಕೋರ್ಟಿನ ತೀರ್ಪಿಗೂ ವಿರುದ್ಧವಾಗಿ ಆಧಾರ್ ಕಾರ್ಡನ್ನು ಕಡ್ಡಾಯಗೊಳಿಸಲು ನಿರ್ಧರಿಸಿರುವ ಹಿಂದಿರುವ ನಿಜವಾದ ಕಾರಣ ಇದೇ ಆಗಿದೆ.

**ಹೀಗೆ ನೋಟುರದ್ಧತಿಯ ಹೆಸರಲ್ಲಿ ಸರಕಾರ ಡಿಜಿಟಲ್ ಆರ್ಥಿಕದತ್ತ ದೇಶವನ್ನು ತಳ್ಳುವಲ್ಲಿ ವಿದೇಶಿ ಕಾರ್ಪೊರೇಟ್‌ಗಳು ಮತ್ತು ಹಣಕಾಸು ಬಂಡವಾಳದ ಎದುರು ಬೆನ್ನು ಬಗ್ಗಿಸಿದೆ. ಇನ್ನೊಂದೆಡೆಯಲ್ಲಿ, ನಗದು ಹೊಂದಿದ್ದು, ಡಿಜಿಟಲ್ ಆರ್ಥಿಕದತ್ತ ಬಲವಂತದ ಪಲ್ಲಟವನ್ನು ವಿರೋಧಿಸುವವರನ್ನು'ದೇಶದ್ರೋಹಿಗಳು', 'ರಾಷ್ಟ್ರ–ವಿರೋಧಿಗಳು' ಮತ್ತು ನೇರವಾಗಿ ಕಪ್ಪು ಹಣವನ್ನು ಪೇರಿಸಿಡದಿದ್ದರೂ, ಕಪ್ಪುಹಣ ಪೇರಿಸಿಟ್ಟವರ ಬೆಂಬಲಿಗರು' ಎಂದು ಹಣೆಪಟ್ಟಿ ಹಚ್ಚಲಾಗುತ್ತಿದೆ.**

ನಿಜ, ಸರಕಾರಕ್ಕೂ ಡಿಜಿಟಲ್ ಆರ್ಥಿಕದಿಂದ ಪ್ರಯೋಜನಗಳಿವೆ. ಇದರಿಂದ ಅದು ದೇಶದ ಹಣ ಸಂಬಂಧಿ ಧೋರಣೆಯನ್ನು ಇನ್ನೂ ಚೆನ್ನಾಗಿ




ವ್ಯಂಗ್ಯಚಿತ್ರ:
ಗೋಕುಲ್,
ಡೆಕ್ಕನ್ ಕ್ರಾನಿಕಲ್



ಹತೋಟಿಯಲ್ಲಿಡಬಹುದು ಮತ್ತು ಬಡ್ಡಿದರಗಳನ್ನು ನಿಯಂತ್ರಿಸುವುದು ಅದಕ್ಕೆ ಬಹಳ ಸುಲಭವಾಗಿ ಬಿಡುತ್ತದೆ.

ಹಣದ ಚಲನೆಯನ್ನು ಗುರುತಿಸಿ 'ಆರ್ಥಿಕದ ನಾಡಿಯನ್ನು' ಇನ್ನೂ ಚೆನ್ನಾಗಿ ಗುರುತಿಸಿಕೊಂಡು ಹೊಸ ತೆರಿಗೆಗಳನ್ನು ವಿಧಿಸುವ ಬಗ್ಗೆ ನಿರ್ಧರಿಸಬಹುದು.

ಅಲ್ಲದೆ, 'ಸಬ್ಸಿಡಿಗಳನ್ನು ಗುರಿಯತ್ತಲೇ' ಸೀಮಿತಗೊಳಿಸಿ ತನ್ನ ಸಬ್ಸಿಡಿಗಳನ್ನು ಕಡಿಮೆ ಮಾಡಬಹುದು. ಈ ರೀತಿ ಸಬ್ಸಿಡಿ ಒದಗಿಸುವುದನ್ನು ಗುರಿ ನಿರ್ದೇಶಿತಗೊಳಿಸುವುದು ನಮ್ಮ ಸಮಾಜದ ರೈತರು ಮತ್ತು ಬಡವರಿಗೆ ಒದಗಿಸುವ ಸಬ್ಸಿಡಿಗಳನ್ನು ಕಡಿಮೆ ಮಾಡುವ ಆಶಯವನ್ನೇ ಹೊಂದಿದೆ ಎಂಬುದನ್ನು ನೋಡಿದ್ದೇವೆ. ಅಂತಿಮವಾಗಿ ಜನಸಾಮಾನ್ಯರಿಗೆ ಕೊಡುವ ಸಬ್ಸಿಡಿಗಳನ್ನು ಪೂರ್ಣವಾಗಿ ನಿರ್ಮೂಲ ಮಾಡುವುದೇ ಅದರ ಆಶಯ.

**ನೋಟು ರದ್ದತಿ ರಿಝರ್ವ್ ಬ್ಯಾಂಕ್ ಮತ್ತು ನಮ್ಮ ಸಾರ್ವಜನಿಕ ವಲಯದ ಬ್ಯಾಂಕುಗಳ ವಿರುದ್ಧ ಜನತೆ ಸಿಟ್ಟಾಗುವಂತೆಯೂ ಮಾಡಿದೆ. ಸರಕಾರ ಬೇಕೆಂದೇ ಜನಗಳ ನಡುವೆ ಈ ಭಾವನೆಉಂಟಾಗಲು ನೆರವಾಗಿದೆ.** ನೋಟುರದ್ಧತಿಯ ಬಗ್ಗೆ ನಿರ್ಣಯಗಳೆಲ್ಲವನ್ನೂ ಸರಕಾರವೇ ಕೈಗೊಂಡರೂ, ಅವುಗಳ ಜಾರಿಯಲ್ಲಿ ವಿಫಲವಾಗಿರುವುದು ಬ್ಯಾಂಕುಗಳು ಎನ್ನುವಂತೆ ಬಿಂಬಿಸಿದೆ. ಸರಕಾರದ ನಿರ್ಣಯಗಳು ಮತ್ತು ಕ್ರಮಗಳಿಂದಾಗಿ ರಿಝರ್ವ್ ಬ್ಯಾಂಕ್ ತಮ್ಮ ಹಣದ ಗ್ಯಾರಂಟು ನೀಡುತ್ತಿಲ್ಲ ಎಂದು ಜನತೆ ವಿಶ್ವಾಸ ಕಳಕೊಳ್ಳುವಂತಾಗಿದೆ. ದೇಶದ ಈ ಕೇಂದ್ರೀಯ ಬ್ಯಾಂಕ್ ಸತತವಾಗಿ ಏನೇನೋ ನಿರ್ಣಯಗಳನ್ನು ಪ್ರಕಟಿಸಿ ನಗೆಪಾಟಲಾಗಿದೆ. ಈ ಅವಧಿಯಾದ್ಯಂತ ಅದು ತನ್ನ ಸ್ವತಂತ್ರ ಅಭಿಪ್ರಾಯವನ್ನು ಎತ್ತಿ ಹಿಡಿಯುವಲ್ಲಿ ವಿಫಲವಾಗಿದೆ. ಅದು ತನ್ನ ಸ್ವಾಯತ್ತತೆಯನ್ನು ಕುಂಠಿತಗೊಳಿಸಿಕೊಂಡಿರುವ ಸಂಸ್ಥೆಯಾಗಿ ಮೂಡಿಬಂದಿದೆ.

ಕರೆನ್ಸಿ ನೋಟುಗಳ ತೀವ್ರ ಕೊರತೆ ಇದ್ದಾಗ ಕರೆನ್ಸಿಯನ್ನು ಮೊದಲು ಪಡೆಯುತ್ತಿದ್ದದ್ದು ಖಾಸಗಿ ಬ್ಯಾಂಕುಗಳು. ಬಹುಪಾಲು ಜನತೆಯ ಸೇವೆಯಲ್ಲಿರುವ ಸಾರ್ವಜನಿಕ ವಲಯದ ಬ್ಯಾಂಕುಗಳಿಗೆ ಇದರಲ್ಲಿ ಎರಡನೆಯ ಆದ್ಯತೆಯಷ್ಟೇ. ಇದರಿಂದಾಗಿ ಜನಗಳ ಆಕ್ರೋಶ ಸಾರ್ವಜನಿಕ ವಲಯದ ಬ್ಯಾಂಕುಗಳ ವಿರುದ್ಧವೇ ಎದ್ದಿತು. ಈ ಎಲ್ಲ ಮಿತಿಗಳ ನಡುವೆಯೂ ಬ್ಯಾಂಕ್ ನೌಕರರು ಹಗಲು–ರಾತ್ರಿಯೆನ್ನದೆ ಜನರಿಗೆ ನೆರವಾಗಲು ಕೆಲಸ ಮಾಡಿದರು. ಆದರೆ ಸರಕಾರ ಮತ್ತು ಬಿಜೆಪಿ ಜನತೆಯ ಸಂಕಷ್ಟಗಳಿಗೆ ಬ್ಯಾಂಕ್ ನೌಕರರನ್ನು ಹೊಣೆ ಮಾಡಲು ಪ್ರಯತ್ನಿಸುತ್ತಿವೆ.

**ಇವನ್ನೆಲ್ಲ ಒಂದು ನಿರ್ದಿಷ್ಟ ಉದ್ದೇಶದಿಂದಲೇ ಮಾಡಲಾಗುತ್ತಿದೆ. ದೇಶದ ಕೇಂದ್ರೀಯ ಬ್ಯಾಂಕ್‌ನ ಅಧಿಕಾರ ಮತ್ತು ಅದರ ಸ್ವಾಯತ್ತತೆಯನ್ನು ಕುಂಠಿತಗೊಳಿಸುವುದು ಅದರ ಬಯಕೆ. ಸಾರ್ವಜನಿಕ ವಲಯದ ಬ್ಯಾಂಕುಗಳನ್ನು ಮತ್ತು ಸಂಸ್ಥೆಗಳ ಹೆಸರುಗೆಡಿಸುವುದು ಕೂಡ ಅದಕ್ಕೆ ಬೇಕಾಗಿದೆ. ಇದು ನಮ್ಮ**

**ಬ್ಯಾಂಕಿಂಗ್ ವಲಯವನ್ನು ಅಂತಿಮವಾಗಿ ಖಾಸಗೀಕರಿಸುವುದಕ್ಕೆ ಬುನಾದಿ ಸಿದ್ಧಮಾಡಲಿಕ್ಕಾಗಿ. ಅಂತರ್‍ರಾಷ್ಟ್ರೀಯ ಹಣಕಾಸು ಬಮಡವಾಳ ನಮ್ಮ ಹಣಕಾಸು ವಲಯವನ್ನು ಪ್ರವೇಶಿಸಲು ಕಾದು ನಿಂತಿದೆ ಎಂಬುದನ್ನು ಮರೆಯಬಾರದು.** ಇದು ಅವರಿಗೆ ಬಹಳ ಮಹತ್ವದ್ದಾಗಿದೆ. ಇದು ಈ ದೀರ್ಘಗೊಂಡಿರುವ ಜಾಗತಿಕ ಹಣಕಾಸು ಬಿಕ್ಕಟ್ಟಿನ ಅವಧಿಯಲ್ಲಿ ಹೆಚ್ಚು ಲಾಭಗಳನ್ನು ಗಳಿಸುವ ಒಂದು ಪರಿಣಾಮಕಾರಿ ಮಾರ್ಗ ಮತ್ತು ಬಿಕ್ಕಟ್ಟಿನಿಂದ ಹೊರಬರುವ ಒಂದು ಸಾಧನ ಎಂದು ಈ ವಿದೇಶಿ ಹಣಕಾಸು ಬಂಡವಾಳ ಪರಿಗಣಿಸಿದೆ. ನೋಟುರದ್ಧತಿಯನ್ನು ನಮ್ಮ ಸರಕಾರ ಅವರ ಉದ್ದೇಶ ಸಾಧನೆಗೆ ಬಳಸಿದೆ. **ನಮ್ಮ ಸಾರ್ವಜನಿಕ ವಲಯದ ಬ್ಯಾಂಕುಗಳ ಬ್ಯಾಲನ್ಸ್ ಶೀಟುಗಳನ್ನು ನಮ್ಮ ಜನಗಳ ಹಣವನ್ನು ಹೀರಿಕೊಂಡು ಸ್ವಚ್ಛಗೊಳಿಸಿ ಅವನ್ನು ಅಂತರ್‍ರಾಷ್ಟ್ರೀಯ ಹಣಕಾಸು ಬಂಡವಾಳಕ್ಕೆ ವಹಿಸಿಕೊಡಲು ಸರಕಾರ ಸಿದ್ಧತೆ ನಡೆಸುತ್ತಿದೆ. ಆದ್ದರಿಂದಲೇ, ನೋಟುರದ್ಧತಿ ಸರಕಾರ ತರಬಯಸುವ ಭಾರೀ ಪ್ರಮಾಣದ ಆರ್ಥಿಕ 'ಸುಧಾರಣೆ'ಗಳಿಗೆ ಬುನಾದಿಯಾಗಿದೆ.**

## ನಮ್ಮ ಪಾತ್ರ

ಬಿಜೆಪಿ ಸರಕಾರದ ಈ ಆಟವನ್ನು ಬಯಲು ಮಾಡುವುದು ದೇಶಪ್ರೇಮಿ ಭಾರತೀಯರಾಗಿ ನಮ್ಮ ಕರ್ತವ್ಯ. ಅನಾಣ್ಯೀಕರಣ ಅಥವ ನೋಟುರದ್ಧತಿ ನವ–ಉದಾರವಾದ ಮತ್ತು ಸರ್ವಾಧಿಕಾರಶಾಹಿಯನ್ನು ಬೆರೆಸುವ ಒಂದು ಜ್ವಲಂತ ಉದಾಹರಣೆ. ಇದು ಕಾರ್ಪೊರೇಟ್‌ಗಳ ಪ್ರಯೋಜನಕ್ಕಾಗಿ ಜನಸಾಮಾನ್ಯರ ಮೇಲೆ ಮಾಡುತ್ತಿರುವ ಒಂದು ದಾಳಿ. ಜನಸಾಮಾನ್ಯರ ಸಂಕಷ್ಟಗಳ ಪರಿವೆಯೇ ಇಲ್ಲದೆ ಅದು ನೋಟುರದ್ಧತಿಯ ತನ್ನ ಸಮರ್ಥನೆಯನ್ನು ಮುಂದೊತ್ತುತ್ತಿದೆ. ಅದೇ ರಿತಿ, ಜನತೆಯ ಬಗ್ಗೆ ಏನೇನೂ ಕಾಳಜಿಯಿಲ್ಲದೆ ಡಿಜಿಟಲ್ ಆರ್ಥಿಕ ವ್ಯವಸ್ಥೆಯತ್ತ ಪಲ್ಲಟದ ದಿಕ್ಕಿನಲ್ಲಿ ಸಾಗುತ್ತಿದೆ.

**ನಗದು ಹೊಂದಿರುವುದು, ಹಣದ ಉಳಿತಾಯ ಮತ್ತು ಅದನ್ನು ನಮ್ಮ ಇಷ್ಟದಂತೆ, ನಮ್ಮ ಅಗತ್ಯಕ್ಕೆ ಅನುಗುಣವಾಗಿ ಬಳಸುವುದು ಹಣಕಾಸು ನಿರ್ಧಾರಗಳನ್ನು ತೆಗೆದುಕೊಳ್ಳುವ ನಮ್ಮ ಹಕ್ಕಿನ ಪ್ರಶ್ನೆಯಷ್ಟೇ ಅಲ್ಲ. ಅದು ನಮ್ಮ ಸಂಸ್ಕೃತಿಯ ಪ್ರತಿಬಿಂಬ ಕೂಡ. ನೋಟುರದ್ಧತಿ, ಈ ರೀತಿಯಲ್ಲಿ, ನಮ್ಮ ಹಣಕಾಸು ನಿರ್ಧಾರಗಳನ್ನು ತೆಗೆದುಕೊಳ್ಳುವ ನಮ್ಮ ಹಕ್ಕಿನ ಮೇಲೆ ನಡೆಸಿರುವ ದಾಳಿ ಮತ್ತು ನಮ್ಮ ಸಂಸ್ಕೃತಿಯ ಮೇಲೆ ನಡೆಸಿರುವ ದಾಳಿ.**

ನಮ್ಮ ಬಳಿಯಿರುವ ಹಣ ನಾವು ಕಷ್ಟಪಟ್ಟು ದುಡಿದದ್ದು, ಅದರಿಂದ ಏನು ಮಾಡುತ್ತೇವೆ ಎಂಬುದನ್ನು ನಾವು ನಿರ್ಧರಿಸುತ್ತೇವೆ. ಉಳಿತಾಯ ಮಾಡಬೇಕೆಂದು ನಾವು ಬಯಸಿದರೆ ಸರಕಾರ ನಮ್ಮ ಉಳಿತಾಯಕ್ಕೆ ಸುರಕ್ಷಿತ ವಿಧಾನಗಳನ್ನು ಒದಗಿಸಬೇಕು. ನಮ್ಮ ಹಣವನ್ನು ಹಿಂತೆಗೆದುಕೊಂಡು ಖರ್ಚು ಮಾಡಬೇಕೆಂದು ಬಯಸಿದರೆ ಸರಕಾರ ಅದಕ್ಕೆ ಅನುವು ಮಾಡಿ ಕೊಡಬೇಕು. ನಾವೆಷ್ಟು ಹಣವನ್ನು ಹಿಂತೆಗೆದುಕೊಳ್ಳಬೇಕು, ಎಷ್ಟು ಖರ್ಚು ಮಾಡಬೇಕು ಎನ್ನುವುದನ್ನು ನಿರ್ದೇಶಿಸುವ

ಹಕ್ಕು ಸರಕಾರಕ್ಕೆ ಇಲ್ಲ. ಅದು ನಮ್ಮ ಹಣ, ಅದನ್ನು ನಾವು ನಿರ್ಧರಿಸುತ್ತೇವೆ. ಇದಕ್ಕಿಂತ ಕಡಿಮೆಯಾದದ್ದೇನೂ ನಮಗೆ ಸ್ವೀಕಾರಾರ್ಹ ಅಲ್ಲ.

ತಮ್ಮ ಹಣವನ್ನು ಹೇಗೆ ಖರ್ಚು ಮಾಡಬೇಕು, ನಗದಿನಲ್ಲೋ ಅಥವ ಡೆಬಿಟ್/ಕ್ರೆಡಿಟ್ ಕಾರ್ಡುಗಳ ಮೂಲಕವೋ ಎಂಬುದರ ನಿರ್ಧಾರವನ್ನು ಜನರಿಗೆ ಬಿಡಬೇಕು. ಸರಕಾರಕ್ಕೆ ಜನಗಳು ನಗದು ವ್ಯವಹಾರಗಳನ್ನು ಮಾಡದಂತೆ ಬಲವಂತ ಮಾಡುವ ಯಾವುದೇ ಹಕ್ಕು ಇಲ್ಲ. ಅದು ಜನರು ತಮ್ಮ ಅನುಕೂಲಕ್ಕೆ ಅನುಗುಣವಾಗಿ ನಿರ್ಧರಿಸಲು ಅಗತ್ಯ ಅವಕಾಶಗಳನ್ನೆಲ್ಲ ಒದಗಿಸಬೇಕು. ಡಿಜಿಟಲ್ ಆರ್ಥಿಕದತ್ತ ಬಲಪ್ರಯೋಗದ ಮೂಲಕ ಪರಿವರ್ತನೆಗೆ ನಾವು ಒಪ್ಪಬಾರದು.

ಸಾರ್ವಜನಿಕ ವಲಯದ ಬ್ಯಾಂಕುಗಳು ಮತ್ತು ಇತರ ಹಣಕಾಸು ಸಂಸ್ಥೆಗಳು ನಮ್ಮ ದೇಶದ ಎಲ್ಲ ಜನರ ಆಸ್ತಿಗಳು. ಸರಕಾರ ಈ ಆಸ್ತಿಗಳ ಮ್ಯಾನೇಜರ್ ಮಾತ್ರ, ಅದು ಅವುಗಳ ಒಡೆಯ ಅಲ್ಲ. ಅದಕ್ಕೆ ಅವುಗಳನ್ನು ಮಾರುವ ಅಥವ ವಿದೇಶಿ ಅಥವ ಖಾಸಗಿ ಕಂಪನಿಗಳಿಗೆ ಅವನ್ನು ವಹಿಸಿಕೊಡುವ ಹಕ್ಕು ಇಲ್ಲ. ಸಾರ್ವಜನಿಕ ವಲಯದ ಬ್ಯಾಂಕುಗಳು ಮತ್ತು ಇತರ ಹಣಕಾಸು ಸಂಸ್ಥೆಗಳು ಜನಗಳ ಒಟ್ಟು ಹಿತದಿಂದ ಕೆಲಸ ಮಾಡಬೇಕೇ ಹೊರತು ಕೆಲವೇ ಕಾರ್ಪೊರೇಟ್‌ಗಳಿಗಾಗಿ ಅಲ್ಲ. ಕಾರ್ಪೊರೇಟ್‌ಗಳು ಪಡೆದ ಎಲ್ಲ ಸಾಲಗಳನ್ನು ನಿಗದಿತ ಸಮಯಗಳಲ್ಲಿ ಮರುಪಾವತಿ ಮಾಡುವಂತೆ ನೋಡಿಕೊಳ್ಳುವುದು ಸರಕಾರದ ಕರ್ತವ್ಯ. ಅವು ಹಾಗೆ ಮಾಡದಿದ್ದರೆ, ಅಂತಹ ಕಾರ್ಪೊರೇಟ್‌ಗಳ ಆಸ್ತಿಗಳನ್ನು ವಹಿಸಿಕೊಳ್ಳಬೇಕು.

**ಒಟ್ಟಿನಲ್ಲಿ, ನಾವು ನೋಟುರದ್ಧತಿಯನ್ನು ಅದರ ನವ-ಉದಾರವಾದಿ ಅಜೆಂಡಾಕ್ಕಾಗಿ ಮಾತ್ರವಲ್ಲ, ಅದರ ಸರ್ವಾಧಿಕಾರಶಾಹಿತ್ವಕ್ಕಾಗಿಯೂ ವಿರೋಧಿಸುತ್ತೇವೆ.**

* ನಾವು ಕಷ್ಟಪಟ್ಟು ದುಡಿದಿರುವ ಹಣದ ಮೇಲೆ ನಮ್ಮ ಹಕ್ಕು ಇರಬೇಕು,
* ನಮ್ಮ ಹಣವನ್ನು ಹೇಗೆ ಖರ್ಚು ಮಾಡುತ್ತೇವೆ– ನಗದಾಗಿಯೋ ಅಥವ ಡೆಬಿಟ್/ಕ್ರೆಡಿಟ್ ಕಾರ್ಡುಗಳ ಮೂಲಕವೋ ಎಂಬುದನ್ನು ಆರಿಸಿಕೊಳ್ಳುವುದು ನಮ್ಮ ಹಕ್ಕಾಗಿರಬೇಕು,
* ನಮ್ಮ ಸಾರ್ವಜನಿಕ ವಲಯದ ಬ್ಯಾಂಕುಗಳು ಮತ್ತು ಇತರ ಹಣಕಾಸು ಸಂಸ್ಥೆಗಳನ್ನು ಸುರಕ್ಷಿತಗೊಳಿಸಬೇಕು,
* ಸಾಲಿನಲ್ಲಿ ನಿಂತು ತಮ್ಮ ಹಣವನ್ನು ಪಡೆಯಲಾಗದೆ ಪ್ರಾಣ ಕಳಕೊಂಡಿರುವ ಎಲ್ಲ ಜನಗಳಿಗೂ ಪರಿಹಾರ ನೀಡಬೇಕು,
* ತಮ್ಮ ಬೆಳೆಗಳಿಗೆ ಮಾರುಕಟ್ಟೆ ಕಳಕೊಂಡಿರುವ ಮತ್ತು ಹೊಸ ಕೃಷಿ ಸೀಜನ್ನಿನಲ್ಲಿ ಬಿತ್ತನೆ ಮಾಡಲು ಸಾಧ್ಯವಾಗದ ಎಲ್ಲ ರೈತರಿಗೆ ಪರಿಹಾರ ನೀಡಬೇಕು,

* ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ದಿಮೆಗಳು ಮುಚ್ಚಿದ್ದರಿಂದ ಕೆಲಸ ಕಳಕೊಂಡ ಎಲ್ಲರಿಗೂ ಪರಿಹಾರ ಕೊಡಬೇಕು,
* ಭ್ರಷ್ಟಾಚಾರವನ್ನು ಎದುರಿಸಲು ಕೇಂದ್ರದಲ್ಲಿ ಲೋಕಪಾಲ ಮತ್ತು ರಾಜ್ಯಗಳಲ್ಲಿ ಲೋಕಾಯುಕ್ತ ವ್ಯವಸ್ಥೆಯನ್ನು ತಕ್ಷಣವೇ ಸ್ಥಾಪಿಸಬೇಕು,
* ತಕ್ಷಣವೇ ಎಲ್ಲ ಸ್ವಿಸ್ ಬ್ಯಾಂಕ್ ಖಾತೆದಾರರ ಹೆಸರುಗಳನ್ನು ಪ್ರಕಟಿಸಬೇಕು ಮತ್ತು ವಿದೇಶಗಳಲ್ಲಿ ಕಾನೂನುಬಾಹಿರವಾಗಿ ಪೇರಿಸಿಟ್ಟ ಹಣವನ್ನು ವಾಪಾಸು ತರಬೇಕು ಮತ್ತು
* ರಾಜಕೀಯ ಭ್ರಷ್ಟಾಚಾರವನ್ನು ತಡೆಯಲು ಚುನಾವಣಾ ಸುಧಾರಣೆಗಳನ್ನು ತರಬೇಕು


**ಎಂದು ನಾವು ಆಗ್ರಹಿಸುತ್ತೇವೆ.**

* ನಮ್ಮ ಬ್ಯಾಂಕ್ ಖಾತೆಗಳಿಂದ ಹಣವನ್ನು ಹಿಂದಕ್ಕೆ ಪಡೆಯುವುದರ ಮೇಲೆ ಮಿತಿಗಳನ್ನು ಹೇರುವುದನ್ನು,
* ಡಿಜಿಟಲ್ ಆರ್ಥಿಕದತ್ತ ಪರಿವರ್ತನೆಗೆಂದು ನಿರ್ಬಂಧಗಳನ್ನು ಹಾಕುವುದನ್ನು,
* ಕಾರ್ಪೊರೇಟ್ ಸಾಲಗಳ ಮನ್ನಾವನ್ನು, ಮತ್ತು
* ನಮ್ಮ ಹಣಕಾಸು ವಲಯವನ್ನು ವಿದೇಶಿ ಬಂಡವಾಳಕ್ಕೆ ತೆರೆಯುವುದನ್ನು

**ನಾವು ವಿರೋಧಿಸುತ್ತೇವೆ.**

---






ವ್ಯಂಗ್ಯಚಿತ್ರ:
ಕೇಶವ್,
ದಿ ಹಿಂದು




**ಶ್ರೀಸಾಮಾನ್ಯ 50ದಿನಗಳಿಗೂ ಹೆಚ್ಚು ಸಮಯ ತಾಳ್ಮೆಯಿಂದ ಕ್ಯೂನಲ್ಲಿ ನಿಂತಿರುವುದಕ್ಕೆ ಪದ್ಮ ಪ್ರಶಸ್ತಿ ಕೊಡಬೇಕು**

ವ್ಯಂಗ್ಯಚಿತ್ರ:
ಶುಭನೀಲ್,ಡೆಕ್ಕನ್ ಕ್ರಾನಿಕಲ್

**ಭಾರತದ ರಾಷ್ಟ್ರೀಯ ಧ್ವಜದ ತ್ರಿವರ್ಣದ ಕಾಲೊರಸು ಮಾರುತ್ತಿದ್ದ ಅಮೆರಿಕಾದ ಅಮೆಝೊನ್ ಕಂಪನಿ ಕ್ಷಮೆ ಕೇಳುವಂತೆ ಮಾಡಿದರು. ಆದರೆ ನೋಟುನಿಷೇಧದಿಂದ ಭಾರತದ ಜನಸಾಮಾನ್ಯರನ್ನು ಅಮೆರಿಕಾದ ವಿಸಾ, ಮಾಸ್ಟರ್ ಕಾರ್ಡುಗಳ ಪ್ರವೇಶಕ್ಕೆ ಕಾಲೊರಸು ಮಾಡಿದವರು ಕ್ಷಮೆ ಕೇಳುವಂತೆ ಯಾರು ಮಾಡಬೇಕು?**




ವ್ಯಂಗ್ಯಚಿತ್ರ:
ಗೋಕುಲ್,
ಡೆಕ್ಕನ್ ಕ್ರಾನಿಕಲ್




ವ್ಯಂಗ್ಯಚಿತ್ರ: ಮಂಜುಲ್, ಡಿಎನ್‌ಎ

'ಗುರಿ ಈಡೇರಿತು' ಎಂದು ಪ್ರಧಾನ ಮಂತ್ರಿಗಳು ಪ್ರಕಟಿಸಿದಾಗ ಅವರ ನಿಜವಾದ ಅರ್ಥ ತಾನು ಇನ್ನಷ್ಟು ನವ-ಉದಾರವಾದಿ ಸುಧಾರಣೆಗಳನ್ನು ತರಲು ಬುನಾದಿ ಹಾಕುವಲ್ಲಿ ಯಶಸ್ವಿಯಾಗಿದ್ದೇನೆ ಎಂದಿರಬಹುದೇ? ಈ ಡಿಜಿಟಲ್ ಆರ್ಥಿಕ ಎನ್ನುವುದು ನಿಜವಾಗಿಯೂ ನಮ್ಮ ದೇಶದಲ್ಲಿ 'ಭಾರೀ ಪ್ರಮಾಣ'ದ ನವ-ಉದಾರವಾದಿ ಸುಧಾರಣೆಗಳನ್ನು ತರಲು ಸರಕಾರಕ್ಕೆ ಒಂದು ವೇದಿಕೆ.

*

ನೋಟುರದ್ಧತಿಯ ಹೆಸರಲ್ಲಿ ಸರಕಾರ ಡಿಜಿಟಲ್ ಆರ್ಥಿಕದತ್ತ ದೇಶವನ್ನು ತಳ್ಳುವಲ್ಲಿ ವಿದೇಶಿ ಕಾರ್ಪೊರೇಟ್‌ಗಳು ಮತ್ತು ಹಣಕಾಸು ಬಂಡವಾಳದ ಎದುರು ಬೆನ್ನು ಬಗ್ಗಿಸಿದೆ.

*

ನಗದು , ಉಳಿತಾಯ ಮತ್ತು ಖರ್ಚು ಮಾಡುವ ಹಣಕಾಸು ನಿರ್ಧಾರಗಳನ್ನು ನಾವೇ ತೆಗೆದುಕೊಳ್ಳುವುದು ನಮ್ಮ ಹಕ್ಕಿನ ಪ್ರಶ್ನೆಯಷ್ಟೇ ಅಲ್ಲ. ಅದು ನಮ್ಮ ಸಂಸ್ಕೃತಿಯ ಪ್ರತಿಬಿಂಬ ಕೂಡ. ನೋಟುರದ್ಧತಿ ನಮ್ಮ ಹಣಕಾಸು ನಿರ್ಧಾರಗಳನ್ನು ತೆಗೆದುಕೊಳ್ಳುವ ನಮ್ಮ ಹಕ್ಕಿನ ಮೇಲೆ ನಡೆಸಿರುವ ದಾಳಿ ಮತ್ತು ನಮ್ಮ ಸಂಸ್ಕೃತಿಯ ಮೇಲೆ ನಡೆಸಿರುವ ದಾಳಿ.